# ಅಪರಂಜಿ

ತಿಳಿನಗೆಯ ಕಾರಂಜಿ

ಸೆಪ್ಟಂಬರ್ 2018

ದಿನಾ ಅಡುಗೆ ಕಾರ್ಯಕ್ರಮ ನೋಡ್ತೀಯಾ
ಏನು ಪ್ರಯೋಜನ? ಎಂದು ಹೆಂಡ್ತೀಗೆ ಹೇಳಿದರೆ,
ಅವಳು - ದಿನಾ ನೀವು ಕ್ರಿಕೆಟ್ ನೋಡೋಲ್ವ?
ಅಂದುಬಿಡೋದೆ?



ಬಿಡಿ ಪ್ರತಿ: ರೂ.10.00

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎಸ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

**ತಿಳಿನಗೆಯ ಕಾರಂಜಿ**

**ಸಂಪುಟ 35**

**ಸಂಚಿಕೆ - 12**

**ಸೆಪ್ಟೆಂಬರ್ - 2018**

## *ಈ ಸಂಚಿಕೆಯಲ್ಲಿ.....*

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಮ್ಮಲ್ಲಿ | ಬೇಲೂರು ರಾಮಮೂರ್ತಿ | 3 |
| ಕೆ. ಶಂಕರ ಪಿಳ್ಳೈ | ಶಿವಕುಮಾರ್ | 4 |
| ನಾನು ಮೆಚ್ಚಿದ ಪುಸ್ತಕ | ಡಾ. ಡಿ.ವಿ. ಗುರುಪ್ರಸಾದ್ | 10 |
| ಭಾಷೆಯ ಬೆಸುಗೆ | ಇ. ಆರ್. ರಾಮಚಂದ್ರನ್ | 14 |
| ತುಂತುರು | ದಂನಆ | 18 |
| ಅಮೆರಿಕಾ ಅಮೆರಿಕಾ | ಪಾಲಹಳ್ಳಿ ವಿಶ್ವನಾಥ್ | 19 |
| ನಾಟಕೋತ್ಸವ | ಗಣೇಶ್ ಹೆಗ್ಗಡೆ | 22 |
| ಬಹು ಮಹಡಿ ಅಗ್ರಹಾರವು | ಶಂಸ | 26 |
| ಬಾಡಿಗೆ ಮನೆ | ನಂ. ನಾಗರಾಜ್ | 30 |
| ತಲೆ ಓಡಿಸೋದು | ಹಾ. ಮ್ಯೆ. ಸೂರಿ | 32 |
| ಮನ್ನಾಭಾಯ್ ..... | ವೈ.ಎಂ. ರಘುನಂದನ್ | 34 |
| ಕಡಲಾಚೆಯ ಸೊಗಡು | ಶಿವಕುಮಾರ್ | 38 |

**ಮುಖಪುಟ ವ್ಯಂಗ್ಯಚಿತ್ರ - ಜಿ.ಎಸ್. ನಾಗನಾಥ್**

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● **ಪ್ರಕಾಶ್**



ಬೋಧಕರ ನೇಮಕಾತಿಗೆ ತಡೆ – ಸುದ್ದಿ

ವಿದ್ಯಾರ್ಥಿಗಳು ನಕ್ಕರಂತೆ!!

★★★

ಮೈತ್ರಿ ಕಟ್ಟುವ ಹೊಣೆ ರಾಹುಲ್‌ಗೆ – ಪತ್ರಿಕೆ

ಹಾಳೂರಿಗೆ...........!!

★★★

ಹತ್ತಿಯಷ್ಟು ಹಗುರದ ಮೊಬೈಲ್ ಶೀಘ್ರವೇ ನನಸು – ಸುದ್ದಿ

ಬೆಲೆಯೂ ಹಗುರವಾಗಿರಬೇಕು ಅಷ್ಟೆ!

★★★

ಸಚಿವ ಸ್ಥಾನ ನೀಡದಿದ್ದರೆ ಮತ ಹಾಕಲ್ಲ – ಹೇಳಿಕೆ

ಮೈತ್ರಿ ಎಂದರೆ ಇದೇ ಇರಬೇಕು!!

★★★

ಆದಾಯ ತೆರಿಗೆ ವ್ಯಾಪ್ತಿ ಹೆಚ್ಚಿಸಿ – ದೆಹಲಿ ವರದಿ

ಗಾಯದ ಮೇಲೆ ಬರೆ!!

★★★

ಆಸ್ತಿ ವಿವರ ಸಲ್ಲಿಸದ 92 ಶಾಸಕರು – ಸುದ್ದಿ

ಪಾಪ! ಬಡವರಿರಬಹುದು!!

★★★

ಭಾರತ – ಪಾಕ್ ನಡುವೆ ಮಾತುಕತೆ ಅಗತ್ಯ – ಶೀರ್ಷಿಕೆ

ಇದು ಅನೂಚಾನವಾದ ಪದ್ಧತಿ!!

★★★

ಕಡಿಮೆ ಪಾಠ, ಹೆಚ್ಚು ಆಟ – ಶೀರ್ಷಿಕೆ

ನಮ್ಮ ಬಾಲ್ಯ ನೆನಪಿಗೆ ಬರುತ್ತೆ!!

## ನಮ್ಮ ನಿಮ್ಮಲ್ಲಿ

ಕಳೆದ ತಿಂಗಳು 25ರಂದು ಒಂದು ಮನ ಮಿಡಿಯುವ ಕಾರ್ಯಕ್ರಮ ನಡೆಯಿತು. ಗೆಳೆಯ ರಾಮನಾಥ್ ದೂರವಾಣಿ ಮಾಡಿ ಜಯನಗರದ ನ್ಯಾಷನಲ್ ಕಾಲೇಜಿನಲ್ಲಿ ಒಂದು ಹಾಸ್ಯ ಸಂಜೆ ಕಾರ್ಯಕ್ರಮ ಮಾಡಿ ಅದರಿಂದ ಬರುವ ಆದಾಯವನ್ನು ಕೊಡಗು ಮತ್ತು ಕೇರಳ ಪ್ರದೇಶಗಳ ನೆರೆ ಸಂತ್ರಸ್ತರಿಗೆ ನೀಡೋಣ ಎಂದರು. ಕೂಡಲೇ ಒಪ್ಪಿಕೊಂಡೆ. ನಂತರ ಎಚ್. ಎನ್ ಕಲಾಕ್ಷೇತ್ರ ಪಡೆಯಲು ಡಾ. ಎ.ಎಚ್. ರಾಮರಾವ್ ಅವರಿಗೆ ದೂರವಾಣಿ ಮಾಡಿದಾಗ ಅವರು ಸಹೃದಯತೆಯಿಂದ ಕಲಾಕ್ಷೇತ್ರವನ್ನು ಶುಲ್ಕವಿಲ್ಲದೇ ಕೊಡಲು ಒಪ್ಪಿದರು. ನಂತರ ವಿಜಯವಾಣಿ ಪತ್ರಿಕೆ ಮತ್ತು ದಿಗ್ವಿಜಯ ವಾಹಿನಿಯವರು ನಾವೂ ಜೊತೆಯಾಗುತ್ತೀವಿ ಎಂದರು. ಹೀಗೆ ಎಲ್ಲ ಸಹೃದಯ ಮನಸ್ಸುಗಳು ಒಂದಾಗಿ 25.8.2018 ರಂದು ಸಂಜೆ 6 ರಿಂದ 9 ಗಂಟೆಯವರೆಗೆ ಎಂ.ಎಸ್. ನರಸಿಂಹಮೂರ್ತಿ, ರಿಚರ್ಡ್ ಲೂಯಿಸ್, ಅಸಾದುಲ್ಲಾ ಬೇಗ್, ವೈ.ವಿ.ಗುಂಡೂರಾವ್, ಬೇಲೂರು ರಾಮಮೂರ್ತಿ, ಅಚ್ಯುತರಾವ್ ಪದಕಿ ಜೊತೆಗೆ ಕಾರ್ಯಕ್ರಮದ ಉಸ್ತುವಾರಿ ಹೊತ್ತಿದ್ದ ರಾಮನಾಥ್ ಎಲ್ಲರೂ ಸೇರಿ ತಮ್ಮ ಹಾಸ್ಯ ಝುರಿಗಳಿಂದ ಸುಮಾರು ಎರಡು ಗಂಟೆಗಳ ಕಾಲ ಸಭಿಕರನ್ನು ರಂಜಿಸಿದರು. ಈ ಮಾತಿನ ಕಾರ್ಯಕ್ರಮಕ್ಕೆ ಜೊತೆಯಾದವರು ನೆರಳು ಬೆಳಕಿನ ಆಟದ ಖ್ಯಾತಿ ಪ್ರಹ್ಲಾದ್ ಆಚಾರ್ಯ, – ಕಾರ್ಯಕ್ರಮಕ್ಕೆ ಅವರು ಬರಲು ಆಗದಿದ್ದರೂ ಅವರ ಪತ್ನಿ ಮತ್ತು ಇಬ್ಬರು ಮುದ್ದಾದ ಮಕ್ಕಳು ಬಹಳ ಅದ್ಭುತವಾದ ಕಾರ್ಯಕ್ರಮ ನಡೆಸಿಕೊಟ್ಟರು. ಇವೆಲ್ಲಕ್ಕೂ ಕಳೆಕಟ್ಟಿದಂತೆ ಮಾತಾಡುವ ಬೊಂಬೆಯ ಖ್ಯಾತಿ ಪಡೆದಿರುವ ಇಂದುಶ್ರೀ ಅವರ ಗೊಂಬೆಯಾಟದ ಪ್ರಹಸನ ಬಹಳ ಮೆಚ್ಚುಗೆ ಪಡೆಯಿತು. ಸಮಯಕ್ಕೆ ಬಹಳ ಮಹತ್ವ ಕೊಟ್ಟ ಕಾರ್ಯಕ್ರಮ ಇದಾದ್ದರಿಂದ ಯಾವ ಕಲಾವಿದರೂ ಅವರಿಗೆ ಕೊಟ್ಟ ಸಮಯಕ್ಕಿಂತ ಮೀರದೇ ಅತ್ಯುತ್ತಮ ಕಾರ್ಯಕ್ರಮ ನಡೆಸಿಕೊಟ್ಟರು.

ಪ್ರಚಾರಕ್ಕೆ ಸಮಯದ ಅಭಾವವಿದ್ದರೂ ಫೇಸ್ ಬುಕ್, ಈಮೈಲ್, ವಾಟ್ಸ್ ಟಪ್ ಮುಖಾಂತರ ಮಾಡಿದ ಮನವಿಯ ಮೇರೆಗೆ ಅಧಿಕ ಸಂಖ್ಯೆಯಲ್ಲಿ ಹಾಸ್ಯಾಸಕ್ತರು ಬಂದಿದ್ದರು. ಹೆಚ್ಚಿನವರು ಕಾರ್ಯಕ್ರಮ ಆಸ್ವಾದಿಸುವುದಕ್ಕೆ ಬಂದಿದ್ದಕ್ಕಿಂತ ಹೆಚ್ಚಾಗಿ ಸಂತ್ರಸ್ತರಿಗೆ ಸಹಾಯ ಮಾಡುವ ಉದಾರ ಮನಸ್ಸಿನಿಂದ ಬಂದಿದ್ದರು. ಹಣ ಚೆಕ್ ಮತ್ತು ನಗದು ಮುಖಾಂತರ ಸಂಗ್ರಹವಾಯಿತು. ಆ ಹಣವನ್ನು ಸಭಿಕರ ಮುಂದೆಯೇ ಎಣಿಸಿ ಲೆಕ್ಕ ಹಾಕಿ ಒಟ್ಟು ಎಷ್ಟು ಮೊತ್ತ ಬಂದಿದೆ ಎಂದು ಘೋಷಿಸಿ (ಸಂಗ್ರಹವಾದದ್ದು 74,000/– ಸಾವಿರ ರೂಪಾಯಿಗಳು) ಅದರಲ್ಲಿ 37,000 ರೂ. ಗಳನ್ನು (11,000 ರೂ ಚೆಕ್ ಮತ್ತು 26,000 ರೂ. ನಗದು) ಕೊಡವ ಸಮಾಜದ ಕಛೇರಿಗೆ ತಲುಪಿಸಿ ರಸೀದಿ ಪಡೆಯಲಾಗಿದೆ. ಅದರಂತೆ ಇನ್ನುಳಿದ 37 ಸಾವಿರ ರೂಪಾಯಿಗಳನ್ನು (10 ಸಾವಿರ ರೂಪಾಯಿ ಚೆಕ್ಕು ಮತ್ತು 27 ಸಾವಿರ ರೂಪಾಯಿ ನಗದು) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿರುವ ಮುಖ್ಯಮಂತ್ರಿಗಳ ನೆರೆ ಪರಿಹಾರ ನಿಧಿಗೆ ಜಮಾ ಮಾಡಿ ರಸೀದಿ ಪಡೆಯಲಾಗಿದೆ.

ನಮ್ಮ ಹಿಂದಿನ ಎಲ್ಲ ಹಿರಿಯ ಹಾಸ್ಯ ಸಾಹಿತಿಗಳೂ ಪದೇ ಪದೇ ಹೇಳುತ್ತಿದ್ದಂತೆ ಹಾಸ್ಯ ಕೇವಲ ನಗಿಸುವ ಸಾಧನವೂ ಅಲ್ಲ ವಾಹನವೂ ಅಲ್ಲ ಅದು ಮುಖ್ಯ ವಾಹಿನಿಗೆ ಬಂದು ಜನರ ಆಶೋತ್ತರಗಳಿಗೆ ಸ್ಪಂದಿಸಬೇಕು ಎನ್ನುವ ಮಾತು ಈ ಕಾರ್ಯಕ್ರಮದಿಂದ ಮತ್ತೊಮ್ಮೆ ಸಾಬೀತಾದಂತಾಗಿದೆ.

**– ಬೇಲೂರು ರಾಮಮೂರ್ತಿ**

# ಕೆ. ಶಂಕರ ಪಿಳ್ಳೈ

**-ಶಿವಕುಮಾರ್**




ನಮ್ಮ ಚಿಕ್ಕಂದಿನಲ್ಲಿ ನಮ್ಮ ಮನೆಗೆ 'ಶಂಕರ್ಸ್ ವೀಕ್ಲಿ' ಪತ್ರಿಕೆ ಪ್ರತಿ ಬುಧವಾರ ತಪ್ಪದೇ ಬಂದು ಬೀಳುತ್ತಿತ್ತು. ನಮ್ಮ ತಂದೆ, ಭಾನುವಾರ ಸಂಜೆ ನಮ್ಮ ಮನೆಯಲ್ಲಿ ಸೇರುತ್ತಿದ್ದ ಕೊರವಂಜಿ ವ್ಯಂಗ್ಯಚಿತ್ರಕಾರರಿಗೆ ಈ ಸಂಚಿಕೆಯ ವ್ಯಂಗ್ಯಚಿತ್ರಗಳನ್ನು ತೋರಿಸುತ್ತಿದ್ದುದು ನನಗೆ ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ಕೇಶವ ಶಂಕರ ಪಿಳ್ಳೈ ಕೇರಳದ ಕಾಯಂಕುಲಂ ಎಂಬ ಹಳ್ಳಿಯಲ್ಲಿ 1902ರಲ್ಲಿ ಜನ್ಮತಾಳಿದರು. ಹತ್ತಿರದ ಮಾವೆಳ್ಳಿಕ್ಕರದಲ್ಲಿದ್ದ ಶಾಲೆಯಲ್ಲಿ ಓದುತ್ತಿದ್ದಾಗ ಒಮ್ಮೆ ನಿದ್ರಿಸುತ್ತಿದ್ದ ಮಾಸ್ತರರ ಚಿತ್ರವನ್ನು ಬರೆದು, ಸಿಕ್ಕಿಹಾಕಿಕೊಂಡು ಮುಖ್ಯೋಪಾಧ್ಯಾಯರ ಕೆಂಗಣ್ಣಿಗೆ ಗುರಿಯಾಗಿದ್ದರಂತೆ. ಶಂಕರ್ ತಮ್ಮ ಶಾಲಾದಿನಗಳನು ಮಾವೆಳ್ಳಿಕ್ಕರದಲ್ಲಿದ್ದ ರವಿವರ್ಮ ಲಲಿತಕಲೆಗಳ ಶಾಲೆಯಲ್ಲಿ ಕಳೆದು ತಮ್ಮ ಕಾಲೇಜು ವಿದ್ಯಾಭ್ಯಾಸವನ್ನು ತಿರುವನಂತಪುರದ ಮಹಾರಾಜಾ ವಿಜ್ಞಾನದ ಕಾಲೇಜಿನಲ್ಲಿ ಮುಗಿಸಿ, ಮುಂಬಯಿಗೆ ಲಾ ಓದಲು ತೆರಳಿದರು. ಅವರಲ್ಲಿದ್ದ ಪ್ರತಿಭಾವಂತ ಕಲೆಗಾರನಿಗೆ ಲಾ ಕಲಿಯುವುದು ಬಹು ಶುಷ್ಕವಾಗಿ ಕಂಡಿದ್ದರಿಂದ ಅವರು ಅದನ್ನು ಅರ್ಧದಲ್ಲಿಯೇ ತುಂಡರಿಸಿ, ಫ್ರೀ ಪ್ರೆಸ್ ಜರ್ನಲ್ ಮತ್ತು ಬಾಂಬೇ ಕ್ರಾನಿಕಲ್ ಪತ್ರಿಕೆಗಳಿಗೆ ವ್ಯಂಗ್ಯಚಿತ್ರಗಳನ್ನು ಬರೆಯಲು ಪ್ರಾರಂಭಿಸಿದರು. ಇವರ ಪ್ರತಿಭೆಯನ್ನು ಗುರುತಿಸಿದ ಹಿಂದೂಸ್ಥಾನ್ ಟೈಮ್ಸ್‌ನ ಸಂಪಾದಕ ಪೋಥನ್ ಜೋಸೆಫ್ ಇವರನು ದೆಹಲಿಗೆ ಕರೆಸಿಕೊಂಡು ಅಲ್ಲಿ ಸ್ಟಾಫ್ ಕಾರ್ಟೂನಿಸ್ಟ್ ಹುದ್ದೆಗೆ ನೇಮಿಸಿದರು. 1932ರಿಂದ 1946ರ ವರೆಗೆ ಶಂಕರ್ ಅಂದಿನ ದಿನಗಳ ರಾಜಕೀಯ ಬೆಳವಣಿಗೆಗಳ ಮೇಲೆ ಬಹು ಪ್ರಭಾವಶಾಲಿಯಾದ ವ್ಯಂಗ್ಯಚಿತ್ರಗಳನ್ನು ರಚಿಸಿ ಅನೇಕ ಮುಖಂಡರ ಗಮನಕ್ಕೆ ಬಂದರು. ಇದೇ ಸಮಯದಲ್ಲಿ ಶಂಕರ್‌ಗೆ ಯುರೋಪಿನ ವಿವಿಧ ದೇಶಗಳಲ್ಲಿ ಪ್ರವಾಸಮಾಡಿ ಅಲ್ಲಿನ ಕಲಾಶಾಲೆಗಳಲ್ಲಿ ತಮ್ಮ ಕಲೆಯನ್ನು ಮೊನಚುಗೊಳಿಸುವ ಅವಕಾಶ ದೊರೆಯಿತು. ಅಲ್ಲಿಂದ ಹಿಂತಿರುಗಿಬರುವ


ಸಮಯದಲ್ಲಿ ಭಾರತ ತನ್ನ ಸ್ವಾತಂತ್ರ ಅರುಣೋದಯದ ಹೊಸ್ತಿಲಿನಲ್ಲಿತ್ತು. ಶಂಕರ್ ಪುನಃ ಕೆಲಸಕ್ಕೆ ಸೇರದೇ ತಮ್ಮದೇ ಆದ ಪತ್ರಿಕೆಯೊಂದನ್ನು ಹೊರತರಲು ನಿರ್ಧರಿಸಿದರು. ಸ್ವಲ್ಪದರಲ್ಲೇ ಶಂಕರ್ಸ್ ವೀಕ್ಲಿಪತ್ರಿಕೆಯ ಮೊದಲ ಸಂಚಿಕೆ ನೆಹರೂರವರಿಂದ ಬಿಡುಗಡೆಯಾಯಿತು.

ಆಗಿನ ದಿನಗಳಲ್ಲಿ ವ್ಯಂಗ್ಯಚಿತ್ರಗಳಿಗಾಗಿಯೇ ಮೀಸಲಿದ್ದ ಪತ್ರಿಕೆಗಳು ಬಹು ವಿರಳ. ಹಾಗಾಗಿ ಶಂಕರ್ಸ್ ವೀಕ್ಲಿ ದೇಶಾದ್ಯಂತ ಬಹು ಜನಪ್ರಿಯವಾಯಿತು ಎಲ್ಲ ರಾಜಕೀಯ ವಿದ್ಯಮಾನಗಳನ್ನೂ ಮುಕ್ತವಾಗಿ ಟೀಕಿಸುತ್ತಿದ್ದ ಈ ಪತ್ರಿಕೆಗೆ 1975ರ ತುರ್ತುಪರಿಸ್ಥಿತಿ ನುಂಗಲಾರದ ತುತ್ತಾಯಿತು. ತಮ್ಮ ಪತ್ರಿಕಾ ಸ್ವಾತಂತ್ರವನ್ನು ರಾಜಕಾರಣಿಗಳ ಮುಲಾಜಿಗೆ ಒತ್ತೆಯಿಡುವ ಬದಲು ಪತ್ರಿಕೆಯನ್ನು ನಿಲ್ಲಿಸುವುದೇ ಲೇಸೆಂದು ಶಂಕರ್ ನಿರ್ಧರಿಸಿದರು. 1976ರಲ್ಲಿ ಶಂಕರ್ಸ್ ವೀಕ್ಲಿಯ ಕೊನೆಯ ಸಂಚಿಕೆ ಹೊರಬಂದಿತು.

ಶಂಕರ್‌ಗೆ 1956ರಲ್ಲಿ ಪದ್ಮಶ್ರೀ, 1966ರಲ್ಲಿ ಪದ್ಮಭೂಷಣ್ ಮತ್ತು 1976ರಲ್ಲಿ ಪದ್ಮವಿಭೂಷಣ್ ಪ್ರಶಸ್ತಿಗಳು ಲಭಿಸಿದವು. 1989ರಲ್ಲಿ ಶಂಕರ್ ನಿಧನರಾದರೂ ಅವರ ಪ್ರತಿಭೆ ಚಿರಸ್ಥಾಯಿಯಾಗಿ ನಿಂತಿದೆ.




**ಚೀನಾ ಆಕ್ರಮಣದ ಸಂದರ್ಭದಲ್ಲಿ ನೆಹರೂರವರ ದ್ವಂದ್ವ**



**ಮಾಡಿದ್ದುಣ್ಣೋ ಮಹರಾಯ!**

''ಬೇರೆಯೋರಿಗೆ ಸಹಾಯ ಮಾಡ್ತೀನಿ ಅನ್ನೋ ಜಂಭದಲ್ಲಿ ಹೊರಗೆ ಹೋಗೋದಕ್ಕಿಂತ ಮನೇಲಿರೋದೇ ವಾಸಿ. ಏಕೆಂದರೆ ಅಂಥ ಜಂಭದ ಮಹಿಳೆಗೆ ಜಗತ್ತಿನಲ್ಲಿ ಸ್ಥಾನವೇ ಇಲ್ಲ''

– *ದೇಶದಲ್ಲಿ ಭಾರತದ ಮಹಿಳೆಯರ ಪಾತ್ರದ ಬಗ್ಗೆ ನೆಹ್ರೂ ಹೇಳಿದ್ದು*



**ದೇಶದ ಒಳಗೆ ಮತ್ತು ಹೊರಗೆ**
**ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪ್ರತಿಷ್ಠೆ ಏರುತ್ತಿದೆ!**




**ನನಗೆ ಯಾವುದು ಒಳ್ಳೇದೋ ನಿಮಗೂ ಅದೇ ಒಳ್ಳೇದು**

*– ಪಂಡಿತ್ ನೆಹರೂರವರು ಕೃಷ್ಣಮೆನನ್ ಪರವಾಗಿ ಉತ್ತರ ಮುಂಬೈನಲ್ಲಿ ಚುನಾವಣಾ ಪ್ರಚಾರ ಪ್ರಾರಂಭಿಸಿದರಂತೆ.*




**ಮುಯ್ಯಿಗೆ ಮುಯ್ಯಿ**

*– ಲೆಹ್ ಪ್ರಾಂತದಲ್ಲಿ ಒಂದು ಒಳ್ಳೆಯ ತೋಪನ್ನು ಬೆಳೆಸಿರುವುದು ದೇಶಕ್ಕೆ ಬಹು ಸಹಾಯಕರ ಎಂದು ಪ್ರಧಾನಿಗಳು ಘೋಷಿಸಿದರು.*




# ನೆರೆ ಸಂತ್ರಸ್ತರಿಗೆ ನೆರವು

ಮಡಕೇರಿ ಮತ್ತು ಕೇರಳದ ನೆರೆ ಸಂತ್ರಸ್ತರಿಗೆ ನಾನೂ 501 ರೂಪಾಯಿ ಕೊಡಬೇಕು ಅಂತ ಮಾಡೇನಿ. ಆದ್ರ ಹೆಂಗ ಕೊಡಬೇಕು ಅಂತ ಗೊತ್ತಾಗವಲ್ದು. ಯಾರ ಕೈಯಾಗನಾದ್ರೂ ಕೊಟ್ರೆ ಅವರು ಮುಟ್ಟಿಸ್ತಾರೋ ಇಲ್ಲಾ ಅವರೇ ತಿಂದ್ಹಾಕ್ತಾರೋ ತಿಳೀವಲ್ದು. ಹೆಂಗಾದ್ರೂ 501 ರೂಪಾಯಿ. ಕೊಡಬೇಕು ಅಂತ ಮಾಡೇನಿ. ಆದರೆ ನಂಬಿಗಸ್ತರು ಸಿಗವಲ್ರು. ಅದೇ ವರಿ ಆಗೇದಿ.

ನರೇಗಲ್ ಬಸ್ ನಿಲ್ದಾಣದ ಹೊರಗಿನ ಡಬ್ಬಿ ಅಂಗಡಿ ಬಳಿ ನಡೆದಿರುವ ಚರ್ಚೆ ಇದು. ಸ್ವಲ್ಪ ಹೊತ್ತಿನ ಚರ್ಚೆಯನ್ನು ಕೇಳಿಸಿಕೊಂಡ ನಂತರ, ನಾನೂ ಮಧ್ಯ ಪ್ರವೇಶಿಸಿ ಮುಖ್ಯಮಂತ್ರಿ ಪರಿಹಾರ ನಿಧಿ ಖಾತೆಗೆ ಹಾಕ್ರಿ ಅಂದೆ. ಬ್ಯಾಂಕ್ನಲ್ಲಿ ದುಡ್ಡು ಇಡುವುದು, ತೆಗೆದುಕೊಳ್ಳುವುದು ಬಿಟ್ಟರೆ ಬೇರೆ ವ್ಯವಹಾರ ಮಾಡಿ ಗೊತ್ತಿಲ್ಲ ಈ ಶ್ರಮಜೀವಿಗಳಿಗೆ. ಅಣ್ಣಾರ ನಿಮ್ಮ ಕೈಯಾಗ ಕೊಡಿತೀವಿ. ನೀವ ಹಾಕಿಬಿಡ್ರಿ ಅಂತ ನನ್ನ ಕೈಯಲ್ಲಿಯೇ ಕೊಡಲು ಬಂದರು! ಏನು ಹೇಳಬೇಕೋ ಗೊತ್ತಾಗಲಿಲ್ಲ.

ನಾನು ಹಣವನ್ನಂತೂ ಮುಟ್ಟಲಿಲ್ಲ. ಬ್ಯಾಂಕ್‌ಗೆ ಹೋಗಿ ಕೇಳ್ರೀ ಅವರೇ ಬ್ಯಾಂಕ್‌ಗೆ ದುಡ್ಡು ಹಾಕೋದನ್ನು ತಿಳಿಸ್ತಾರೆ ಜೊತೆಗೆ ನೀವಾ ಆ ಖಾತೆಗೆ ಹಣ ತುಂಬಿದರೆ ನಿಮ್ಮ ಹೆಸರಿನಲ್ಲಿ ತುಂಬಿದಂಗೆ ಆಗುತ್ತೆ. ನಾನು ಹಾಕಿದರೆ ನನ್ನ ಹೆಸರಿನಲ್ಲಿ ತುಂಬಿದಂಗೆ ಆಗುತ್ತೆ ಅಂದೆ. ಆಗ ಆ ಪುಣ್ಯಾತ್ಮ ಸಾಹೇಬ್ರ, ನಮಗೆ ನಮ್ಮ ಹೆಸರು ಮುಖ್ಯ ಅಲ್ರೀ, ಸಂತ್ರಸ್ತರಿಗೆ ಹಣ ಮುಟ್ಟೋದು ಮುಖ್ಯ ಅಂದರು. ಗದ್ಗದಿತನಾಗಿ ಕೆಲ ಕಾಲ ಮಾತೇ ಹೊರಳಲಿಲ್ಲ.

TEMPLE
OF
KNOWLEDGE

DISTANCE EDUCATION
(Govt. & UGC Recognised Universities)

# BEECHI VIDYA KENDRA

## ADMISSION OPEN - APPLY NOW

## CENTER OF DISTANCE LEARNING

**MBA WITH 6 SPECIALIZATIONS,**
**MA, M.COM, MCA, MSc-BT,**
**PGDCS, BA & B.COM - AGE BASIS**

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE
OF
KNOWLEDGE

Email : admin@beechi.in
Web : www.becchi.in
Mob. 9740968677

ನಾನು ಮೆಚ್ಚಿದ ಪುಸ್ತಕ

# ಜಾಕ್ ಓ ಯೇ ನ ಹಾಸ್ಯ ಭರಿತ ಪತ್ತೇದಾರಿ ಕಾದಂಬರಿಗಳು

– ಡಾ.ಡಿ.ವಿ. ಗುರುಪ್ರಸಾದ್

ಸಾಮಾನ್ಯವಾಗಿ ಪತ್ತೆದಾರಿ ಕಾದಂಬರಿಗಳು ಬಹಳ ಗಂಭೀರವಾಗಿರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಪತ್ತೆದಾರಿ ಕಾದಂಬರಿಗಳಲ್ಲಿ ಹಾಸ್ಯವನ್ನು ಅಳವಡಿಸುತ್ತಿರುವ ಹೊಸ ಪ್ರವೃತ್ತಿ ಬೆಳೆದಿದ್ದು ಇಂತಹ ಕೃತಿಗಳಿಗೆ ವಿಶೇಷ ಮೆರಗು ಬರುತ್ತಲಿದೆ.

ಬೆಂಗಳೂರಿನಲ್ಲಿ ನೆಲೆಸಿರುವ ಇಂಗ್ಲಿಷ್ ಕಾದಂಬರಿಕಾರ ಜಾಕ್ ಓ ಯೇ ಬರೆದಿರುವ ಮೂರು ಕಾದಂಬರಿಗಳ ಗುಚ್ಛ (ಟ್ರಿಲಜಿ) ಇಂತಹ ಪ್ರಕಾರಕ್ಕೆ ಸೇರಿವೆ. ಫಿನ್‌ಲಾಂಡ್‌ನಲ್ಲಿ ಸಕಾರಿ ನೂವೋಟಿಮಾಕಿ ಎಂಬ ಹೆಸರಿನಿಂದ ಜನಿಸಿದ ಈ ಕಾದಂಬರಿಕಾರ ತಮ್ಮ ಕಾದಂಬರಿಗಳನ್ನು ಜಾಕ್ ಓ ಯೇ ಎಂಬ ಅನ್ವರ್ಥ ನಾಮದಲ್ಲಿ ಬರೆದಿದ್ದಾರೆ. ಈ ಹೆಸರು 'ಹೋಗೋಲೇ' ಜತೆ ಎಷ್ಟು ಚೆನ್ನಾಗಿ ಪ್ರಾಸವಾಗುತ್ತದೆ ಎಂದೆನಿಸಿ ನನಗೆ ಮೋಜೆನಿಸಿತು.

ಈ ಕಾದಂಬರಿಕಾರ ಸ್ವೀಡನ್‌ನಲ್ಲಿ ಹಿಂದಿ ಭಾಷೆಯನ್ನು ಕಲಿತು ನಂತರ ಭಾರತಕ್ಕೆ ಬಂದು ಸಧ್ಯಕ್ಕೆ ಬೆಂಗಳೂರಿನಲ್ಲೇ ನೆಲೆಸಿದ್ದಾರೆ. ಹಲವಾರು ಭಾರತೀಯ ಭಾಷೆಗಳನ್ನು ಕಲಿತಿರುವ ಈ ಕಾದಂಬರಿಕಾರ ಸುಮಾರು ಒಂದು ದಶಕಗಳಿಂದ ಕಾದಂಬರಿಗಳನ್ನು ಬರೆಯುತ್ತಿದ್ದು ಬಹಳ ಜನಪ್ರಿಯರಾಗಿದ್ದಾರೆ.

ಇವರ ಮೂರು ಕಾದಂಬರಿಗಳ ಗುಚ್ಛದಲ್ಲಿ ಮೊದಲನೆಯದೇ ಮಿಸ್ಟರ್ ಮೆಜೆಸ್ಟಿಕ್. ಶೀರ್ಷಿಕೆಯಿಂದಲೇ ಈ ಕಾದಂಬರಿಯ ಬಗ್ಗೆ ಕುತೂಹಲ ಮೂಡಿ ಕಾದಂಬರಿಯನ್ನು ಖರೀದಿಸಿದೆ. ಎಷ್ಟು ಸೊಗಸಾಗಿ ಓದಿಸಿಕೊಂಡು ಹೋಯಿತೆಂದರೆ ಒಂದೇ ದಿನದಲ್ಲಿ ಓದಿ ಮುಗಿಸಿದೆ.

2013ರಲ್ಲಿ ಪ್ರಕಟಗೊಂಡ 'ಮಿಸ್ಟರ್ ಮೆಜೆಸ್ಟಿಕ್ – ದಿ ಟೌಟ್ ಆಫ್ ಬೆಂಗಳೂರು' ಕಾದಂಬರಿಯ ಕಥಾ ನಾಯಕ ಹರಿ. ಆದರೆ ಆತ ಮಿಸ್ಟರ್ ಮೆಜೆಸ್ಟಿಕ್ ಎಂದೇ ಎಲ್ಲರಿಗೂ ಪರಿಚಿತ. ಈತನಿಗೆ ಆ ಹೆಸರು ಬಂದ ಕಾರಣ ಆತ ತಿಂಗಳ ಕೂಸಾಗಿ ಬೆಂಗಳೂರಿನ ಮೆಜೆಸ್ಟಿಕ್ ಥಿಯೇಟರ್‌ನಲ್ಲಿ ಸೀಟೊಂದರ ಕೆಳಗೆ ಸಿಕ್ಕ ಕಾರಣಕ್ಕೆ. ಸಿನಿಮಾ ಮಂದಿರದಲ್ಲಿ ಕಸ ಗುಡಿಸುವವಳು ಸಾಕಿ ದೊಡ್ಡವನಾದ ಹರಿ ಬೆಂಗಳೂರಿನ ಕೆಂಪೇಗೌಡ ಬಸ್‌ಸ್ಟಾಂಡ್‌ನಿಂದ ಸಿಟಿ ಮಾರ್ಕೆಟ್ ಪ್ರದೇಶದಲ್ಲೇ ಬೆಳೆದು ಬೆಂಗಳೂರಿಗೆ ಬರುವ ಪ್ರವಾಸಿಗರಿಗೆ ಲಾಡ್ಜ್‌ಗಳಲ್ಲಿ ರೂಂಗಳನ್ನು ಕೊಡಿಸುವ ದಲ್ಲಾಳಿಯಾಗುತ್ತಾನೆ. ಜತೆಗೆ ಪ್ರವಾಸಿಗರಿಗೆ ಊರುಗಳನ್ನು ತೋರಿಸುವ ಗೈಡ್ ಕೂಡಾ ಆಗುತ್ತಾನೆ.

ಸಿನಿಮಾ ನಟಿಯಾಗಲು ಬಯಸಿ ಬೆಂಗಳೂರಿಗೆ ಬಂದ ಒಬ್ಬ ವಿದೇಶೀ ಯುವತಿಯನ್ನು ಪರಿಚಯ ಮಾಡಿಕೊಂಡ ಹರಿ ಆಕೆ ಇದ್ದಕ್ಕಿದಂತೆ ಮಾಯವಾದಾಗ ಆಕೆಯನ್ನು ಹುಡುಕುವ ಜವಾಬ್ದಾರಿ ಹೊತ್ತು ಪತ್ತೆದಾರಿ ಕೆಲಸ ಮಾಡುವಾಗ ಅನುಭವಿಸುವ ಸನ್ನಿವೇಶಗಳೇ ಕಾದಂಬರಿಯ ಕಥಾವಸ್ತು. ಈ

ಕಾದಂಬರಿಯನ್ನು ಓದುತ್ತಾ ಹೋದಂತೆ ಯಾವುದೋ ಮಸಾಲಾಭರಿತ ಬಾಲಿವುಡ್ ಸಿನಿಮಾ ನೋಡಿದಂತೆ ಭಾಸವಾಗುತ್ತದೆ.

ಕಾದಂಬರಿಯ ಬಹುತೇಕ ಪಾತ್ರಧಾರಿಗಳೆಲ್ಲರೂ ನಗೆ ತರಿಸುವ ವಿಚಿತ್ರ ಜನ. ಹರಿಯ ಸಹಚರರಲ್ಲಿ ಒಬ್ಬ 'ಎಸಿಗಾಡಿ' ಹೆಸರಿನ ಆಟೋರಿಕ್ಷಾ ಚಾಲಕ. ಎರಡನೆಯ ವ್ಯಕ್ತಿ ಕಾಮಪ್ರಚೋದಕ ಸಿ.ಡಿಗಳನ್ನು ಮಾರುವ 'ಟ್ರಿಪಲ್ ಎಕ್ಸ್'. ಮೂರನೆಯವನು ವೈದ್ಯನಾಗಿರದಿದ್ದರೂ ಬುದ್ಧಿವಂತನಾದ್ದರಿಂದ ಎಲ್ಲರೂ ಆತನನ್ನು ಡಾಕ್ಟರ್ ಎಂದು ಕರೆಯುತ್ತಾರೆ. ಹರಿಯ ಹೆಂಡತಿ ಮಲೆಯಾಳಿ ನರ್ಸ್ ಡೈಮಂಡ್. ಇವನ ಮಕ್ಕಳ ಹೆಸರು ಒಂದು, ಮತ್ತು ಎರಡು. ವಿಲನ್‌ನ ಹೆಸರು ಡೆಡ್ಲಿಯಪ್ಪ. ಒಬ್ಬ ಪಾತ್ರಧಾರಿ ಹೆಡ್ ನರ್ಸ ಹೆಸರು ಕೊಲವೇರಿ (ನನಗೆ ತಮಿಳು ಹಾಡೊಂದು ನೆನಪಾಯಿತು). ಇನ್ನೊಬ್ಬ ಪಾತ್ರಧಾರಿ ಹರಿಯ ಮೀಸೆಗಿಂತಲೂ ದೊಡ್ಡ ಮೀಸೆಯುಳ್ಳ ಗಂಡ ಮಕ್ಕಳ ಚಿಂತೆ ಬಿಟ್ಟ ಲೇಡಿ ಪೋಲೀಸ್ ಸಬ್ ಇನ್ಸ್ಪೆಕ್ಟರ್ 'ಪೋಲೀಸ್ ಆಂಟಿ'

ಕೆಲ ಕಾಲದ ನಂತರ ದಲ್ಲಾಲಿ ಕೆಲಸವನ್ನು ಬಿಟ್ಟು ಹರಿ ಮೆಜೆಸ್ಟಿಕ್ ಪ್ರದೇಶದಲ್ಲೇ ಪಂಚರ್ವಾಲಾ ಕಾಂಪ್ಲೆಕ್ಸ್‌ನಲ್ಲಿ 'ಮಿ. ಮೆಜಸ್ಟಿಕ್ ಓ.ಕೆ. ಅಂಡ್ ಕಂಪನಿ' ಎಂಬ ಸಣ್ಣ ಪತ್ತೆದಾರಿ ಏಜನ್ಸಿಯನ್ನು ಪ್ರಾರಂಭ ಮಾಡುತ್ತಾನೆ. ಅವನ ಮುಂದಿನ ಸಾಹಸ ಎರಡನೆಯ ಕಾದಂಬರಿ 'ಏ ಹೀರೋಫಾರ್ ಹೈರ್' ನಲ್ಲಿ ಬಿಂಬಿತವಾಗುತ್ತದೆ. ತನ್ನ ಪತ್ನಿಯ ಶೀಲವನ್ನು ಶಂಕಿಸುವ ಕಾಫಿಪುಡಿ ವ್ಯಾಪಾರಿ ಇವನ ಮೊದಲ ಗಿರಾಕಿ. ಈ ಪ್ರಕರಣವನ್ನು ಪತ್ತೆ ಮಾಡಲು ಹೋಗಿ ಹರಿ ಕಿಡ್ನಿ ಕಳ್ಳರ ಜಾಲಕ್ಕೆ ಸಿಲುಕಿ ತನ್ನ ಕಿಡ್ನಿಯನ್ನು ಕಳೆದುಕೊಳ್ಳುತ್ತಾನೆ. ಆದರೆ ಕಳ್ಳರ ಬಂಧನಕ್ಕೆ ಪೋಲೀಸರಿಗೆ ನೆರವಾಗುತ್ತಾನೆ.

ಮೂರನೆಯ ಕಾದಂಬರಿ 'ಟ್ರಾಪಿಕಲ್ ಡಿಟೆಕ್ಟಿವ್' ನಲ್ಲಿ ಒಂದು ಬ್ಯಾಂಕ್ ಎ.ಟಿ.ಎಮ್ ಕಳುವಿನಲ್ಲಿ ಶಾಮಿಲಾದ ಎಂಬ ಮಿಥ್ಯಾಪವಾದಕ್ಕೆ ಗುರಿಯಾಗಿ ಆನಂತರ ತನ್ನ ಸಾಚಾತನ ತೋರಿಸಲು ಸಾಕಷ್ಟು ಹೆಣಗುತ್ತಾನೆ. ಇದೇ ಕಾದಂಬರಿಯಲ್ಲೇ ಆತ ಮಂಡ್ಯ ಜಿಲ್ಲೆಯ ಒಂದು ದೇವಸ್ಥಾನದಲ್ಲಿ ಕಳುವಾದ ಒಂದು ಪುರಾತನ ವಿಗ್ರಹ ಪತ್ತೆಗೂ ನೆರವಾಗುತ್ತಾನೆ.

ಜಾಕ್ ಓ ಯೇನ ಕಾದಂಬರಿಗಳಲ್ಲಿ ಬೆಂಗಳೂರಿನ ಮಧ್ಯಭಾಗದ ಗಲ್ಲಿಗಲ್ಲಿಗಳು, ಸಣ್ಣ ಪುಟ್ಟ ಲಾಡ್ಜ್‌ಗಳು, ಸೆರೆ ಅಂಗಡಿಗಳು, ಪ್ರವಾಸಿಗರನ್ನು ಮೋಸ ಮಾಡುವ ವಿವಿಧ ವ್ಯಾಪಾರಿಗಳು, ಇವುಗಳ ಚಿತ್ರಣ ಬಹಳ ಸುಂದರವಾಗಿ ರೂಪಿತವಾಗಿದೆ. ಹುಟ್ಟು ಬೆಂಗಳೂರಿಗನಾದ ನನಗೇ ಗೊತ್ತಿಲ್ಲದ ಬೆಂಗಳೂರಿನ ವಿವರಗಳು ಈ ಕಾದಂಬರಿಗಳಲ್ಲಿವೆ. ಈ ಕಾದಂಬರಿಗಳನ್ನು ಓದುತ್ತಿದ್ದರೆ ಮೆಜಸ್ಟಿಕ್‌ನ ನಿವಾಸಿಯೇ ಈ ಕಾದಂಬರಿಗಳನ್ನು ಬರೆದಿರಬಹುದು ಅಂದುಕೊಳ್ಳುವ ಮಟ್ಟಿಗೆ ನೈಜತೆಯಿದೆ.

ಈ ಕಾದಂಬರಿಗಳಲ್ಲಿ ಬರುವ ಸನ್ನಿವೇಶಗಳು ಹಾಗೂ ಪಾತ್ರಧಾರಿಗಳು ತಡೆಯಲಾರದಷ್ಟು ನಗೆಯನ್ನು ಪ್ರಚೋದಿಸುತ್ತವೆ. ಪುಟಪುಟಗಳಲ್ಲೂ ನಗೆ ಕಾರಂಜಿಗಳಿವೆ. ನಾನಂತೂ ಹೊಟ್ಟೆ ಹುಣ್ಣಾಗುವಷ್ಟು ನಕ್ಕೆ.

ಪತ್ತೆದಾರಿ ಕಾದಂಬರಿಗಳ ಆಸಕ್ತರು ಹಾಗೂ ಹಾಸ್ಯಪ್ರಿಯರು ಓದಲೇಬೇಕಾದ ಕಾದಂಬರಿಗಳು ಇವು.

ಜಾಕ್ ಓ ಯೇ ಇಂಗ್ಲೀಷ್ ಕಾದಂಬರಿಗಾರ್ತಿ ಅಂಜುಮ್ ಹಸನ್‌ರನ್ನು ವಿವಾಹವಾಗಿ ಸಧ್ಯಕ್ಕೆ ಬೆಂಗಳೂರಿನಲ್ಲೇ ನೆಲೆಸಿದ್ದಾರೆ.

# RAMAIAH
Indic Specialty Ayurveda

RESTORATION HOSPITAL

## Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

NABH

Proud to Announce
**NABH Accrediation**



Under the Leadership of
**Prof. Dr. G.G. Gangadharan**

## World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ
# ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೆ?

**ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.**

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA ON MODERN METHODS OF ANALYSIS FOR FOOD / DRUG / ENVIRONMENT FOR GRADUATES & POST-GRADUATES IN SCIENCE, ENGG, PHARMACY, BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

# ಭಾಷೆಯ ಬೆಸುಗೆ!

**– ಇ.ಆರ್. ರಾಮಚಂದ್ರನ್**

ನನಗೆ ಅಲ್ಪ ಸ್ವಲ್ಪ ತೆಲುಗು ಬರುತ್ತೆ. ನಾನು ಚಿಕ್ಕವನಾಗಿದ್ದಾಗ ನಮ್ಮ ಪಕ್ಕದ ಮನೆಯಲ್ಲಿ ತೆಲುಗಿನವರು ಇದ್ದರು. ಅವರ ಹುಡುಗರ ಜೊತೆ ಆಟವಾಡುತ್ತಾ ತೆಲುಗು ಸುಮಾರಾಗಿ ಕಲ್ತಿದ್ದೆ. ಇದು ಎಷ್ಟೋ ವರ್ಷವಾದ ಮೇಲೆ ಕಷ್ಟದ ಸಮಯದಲ್ಲಿ ಬಹಳ ಅನೀರಿಕ್ಷಿತವಾಗಿ ಉಪಯೋಗಕ್ಕೆ ಬಂತು.

**ಕನ್ನಡದವನನ್ನು ಪಾರು ಮಾಡಿದ ಘಂಟಸಾಲ, ನಾಗೇಶ್ವರ ರಾವ್**

ನಾನು ಮದ್ರಾಸಿನಲ್ಲಿ (ಈಗ ಚೆನ್ನೈ) ಕೆಲಸ ಮಾಡುತ್ತಿದ್ದಾಗ, ನಮ್ಮ ಆಫೀಸಿನವರು ನಮ್ಮ ಡಿಪಾರ್ಟಮೆಂಟನ್ನು ಬೊಂಬಾಯಿಗೆ (ಈಗ ಮುಂಬೈ) ದಿಢೀರನೆ ವರ್ಗಾವಣೆ ಮಾಡಿದರು. ಆಫೀಸುಗಳೇ ಹೀಗೆ. ವರ್ಷವೆಲ್ಲಾ ಸುಮ್ಮನಿದ್ದು ದೀಪಾವಳಿ ಅಥವಾ ಪೊಂಗಲ್ ರಜದ ಮಧ್ಯೆ ಉಸಿರಾಡುವುದಕ್ಕೂ ಟೈಮ್ ಕೊಡದೆ ಏಕಾಏಕಿ ಒಂದು ಕಡೆಯಿಂದ ಇನ್ನೊಂದು ಕಡೆ ಕಿತ್ತೊಗೆಯುವುದು ಸಾಮಾನ್ಯ. ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ನಮ್ಮ ವಾಹನ ತೊಗೊಂಡು ಹೋದರೆ ಅದಕ್ಕೆ ಮುಂಚೆ ಆರ್‌ಟಿಓ ದಿಂದ 'ನೊ ಅಬ್ಜಕ್ಷನ್ ಸರ್ಟಿಫಿಕೇಟ್' (ಎನ್‌ಓಸಿ) ತೊಗೋಬೇಕು.

ನಾನು ಚೆನ್ನೈ ಆರ್‌ಟಿಓ ಆಫೀಸಿಗೆ ಹೋಗಿ ನನ್ನ ಸ್ಥಿತಿಯನ್ನು ವಿವರಿಸಿ 'ಎನ್‌ಓಸಿ' ಬೇಕೆಂದಾಗ, ಕೌಂಟರ್ನಲ್ಲಿದ್ದವರು ಮಾತನಾಡದೆ ಒಂದು ಫಾರ್ಮ್ ಕೈಗೆ ಕೊಟ್ಟರು. ಅದರಲ್ಲಿ ಕೇಳಿದ ಪ್ರಶ್ನೆಗೆ ನನ್ನ ಹೆಸರು, ಅಡ್ರೆಸ್, ಕಾರಿನ ಕುಲ, ಗೋತ್ರ, ನಂಬರ್ ಎಲ್ಲವನ್ನೂ ಬರೆದು ಫಾರ್ಮನ್ನು ವಾಪಸ್ಸು ಕೊಟ್ಟಾಗ, ಅವರು ನನ್ನ ಕಡಗೆ ನೋಡದೆಯೇ 'ಕಮ್ ಆಫ್ಟರ್ 15 ಡೇಸ್' ಎಂದರು. ನನ್ನ ಎದೆ ಧಸಕ್ ಅಂತ ಕುಸೀತು! ನಾನು ಮಾರನೆಯ ದಿನವೇ ಬೊಂಬಾಯಿಗೆ ಹೋಗಲು ಟಿಕೆಟ್ ಬುಕ್ ಮಾಡಿದ್ದೆ. ಮುಂದೆ ಹತ್ತು ನಿಮಿಷ ನಾನು ಅವರಲ್ಲಿ ಬಡಕೊಂಡೆ, ಕೇಳಿಕೊಂಡೆ, ಕೊನೆಗೆ ಗೋಗರಿದೆ, ಕಾಲು ಹಿಡಿಯುವುದು ಮಾತ್ರ ಬಾಕಿ ಉಳಿದಿತ್ತು. ಆಸಾಮಿ ಬಗ್ಗಲೇ ಇಲ್ಲ. ಒಂದೇ ಮಂತ್ರ. 'ಕಮ್ ಆಫ್ಟರ್ 15 ಡೇಸ್'.

ಹತಾಶನಾಗಿ ವಾಪಸ್ಸು ಬರಲು ತಿರುಗುತ್ತಿದ್ದಾಗ, ಕಿವಿಗೆ ಏನೋ ಬಿತ್ತು. 'ಚೂಡು! ಇಪ್ಪೊದ್ದು ವಚ್ಚಿನ್ನಾಡು. ಇಪ್ಪೊಡ್ದೇ 'ಎನ್‌ಓಸಿ' ಕಾವಾಲ್ನಂಟ!' (ನೋಡು.. ಈತ ಈಗ ಬಂದಿದ್ದಾನೆ.. ಇವತ್ತೇ ಇವನಿಗೆ ಎನ್‌ಓಸಿ ಬೇಕಂತೆ) ಆತನ ಸಹೋದ್ಯೋಗಿಗೆ ನನ್ನ ವಿಚಾರ ಹೇಳ್ತಾ ಇದ್ದ. ನನಗೆ ಆ ಮಾತು 'ಮಧುರ ಮಧುರವೀ ಮಂಜುಳಗಾನ..' ಹಾಡಿನ ಹಾಗೆ ಕೇಳಿಸಿತು. ಮುಳುಗುತ್ತಿದ್ದವನಿಗೆ ಹುಲ್ಲೇ ಹಗ್ಗವಂತೆ! ನಾನು ತಕ್ಷಣವೇ ರೈಟ್ ಎಬೌಟ್ ಟರ್ನ ತಿರುಗಿ, 'ನಾಕಿ ಕೊಂಚಮು ಹೆಲ್ಪ್ ಚೇಯೆಂಡಿ ಸಾರ್' ಅಂತ ತೆಲುಗಿನಲ್ಲಿ ಗೋಗರಿದೆ. ಅವನ ಮುಖದಲ್ಲಿ ಆದ ಬದಲಾವಣೆಯನ್ನು ನಾನು ಹೇಗೆ

ವಿವರಿಸಲಿ? ನಾವು ಸಹರಾ ಮರುಭೂಮಿಯಲ್ಲಿ ನೀರಿಲ್ಲದೆ ಅಸಹಾಯದಿಂದ ಮೈಲಿ ಗಟ್ಟಲೆ ನಡೆದು ಹೋಗುತ್ತಿದ್ದಾಗ ಇದ್ದಕ್ಕಿದಂತೆ ಎಳನೀರು ಕುಡಿಯಲು ಸಿಕ್ಕಿದರೆ ಹೇಗಿರುತ್ತೆ? ಹಾಗೆ ಬದಲಾಯಿತು ಅವನ ಮುಖದ ಚರ್ಯೆ. ಮಾತೃ ಭಾಷೆಗೆ ಆ ಪವರ್ ಇದೆ. ವಿಚಿತ್ರ. ಮುಖದಲ್ಲಿ ಆಶ್ಚರ್ಯದ ಸಂತೋಷದ ಮಾರ್ಪಾಡು. 'ಮೀರು ತೆಲುಗಾ'? ಅಂದ. ಆತನ ಧ್ವನಿ ಈಗ ಪ್ರೀತಿ ಮತ್ತು ಅಕ್ಕರೆಯಿಂದ ತುಳುಕುತ್ತಿತ್ತು. ನಾನು, 'ಲೇದು ಸಾರ್! ಕೊಂಚಮು ತೆಲುಗು ವಸ್ತುಂದಿ. ಘಂಟಸಾಲ ಪಾಟ್ಲು ವಿಂಟಾನು.. ನಾಗೇಶ್ವರ ರಾವ್ ಪಿಕ್ಚರ್ ಚೂಸಿನ್ನಾನು. ವಾಳ್ಳು ದೇವದಾಸ್ಲ ಮಂಚಿ ಬಾಗ ಆಕ್ಟಿಂಗ್ ಚೇಸಿನ್ನಾರು' ಅಂದೆ.

ಹೊರಗಡೆಯಿಂದ ಬಂದ ಫಾರಿನ್ನರ್ ಮುಂಬೈಗೆ ಹೋಗಿ ಯಾರನ್ನಾದರೂ ದಾರಿಯಲ್ಲಿ ನಿಲ್ಲಿಸಿ, 'ಐ ಆಮ್ ಎ ಫ್ಯಾನ್ ಅಫ್ ಸಚಿನ್ ಟೆಂಡೂಲ್ಕರ್. ಪ್ಲೀಸ್ ಟೆಲ್ ಮಿ ಸಮ್ ಥಿಂಗ್ ಎಬೌಟ್ ಹಿಮ್' ಅಂದರೆ ಅವನನ್ನು ದರ ದರ ಮನೆಗೆ ಎಳೆದುಕೊಂಡು ಹೋಗಿ ಅವನಿಗೆ ಬಟಾಟ ಪೋಹ, ವಡಾ ಪಾವ್ ಮತ್ತು ಶ್ರೀಖಂಡ್ ತಿನ್ನಿಸಿಯೇ ಅಹೋ ರಾತ್ರಿ ಟೆಂಡೂಲ್ಕರ್ ಹುಟ್ಟಿದ ದಿನದಿಂದ ಹಿಡಿದು, ಅವನ ಕ್ರಿಕೆಟ್, ರೆಕಾರ್ಡು, ಷೂಮ್ಯಾಕರ್ ಫೆರಾರಿ ಕಾರು ಕೊಟ್ಟಿದ್ದು, ಭಾರತ ರತ್ನ ಪ್ರಶಸ್ತಿ, ಎಂಪಿ ಎಲ್ಲವನ್ನೂ ಬೆಳಕು ಹರಿಯುವ ತನಕ ಹೇಳದಿದ್ದರೆ ಅವನು ಮರಾಠಿಯವನೇ ಅಲ್ಲ. ಅದನೆಲ್ಲಾ ಕೇಳಿದ ಹೊರಗಿನವನಿಗೆ ಮತ್ತು ಹಿಡಿದಂತೆ ಆದರೆ ಆಶ್ಚರ್ಯವೇನಿಲ್ಲ.

ಹಾಗಾಯಿತು ನಮ್ಮ ಆರ್ ಟಿ ಓ ಕೌಂಟರನವನಿಗೆ. ಸ್ವಲ್ಪ ಸುಧಾರಿಸಿಕೊಂಡು ನನಗೆ ತೆಲುಗಿನಲ್ಲಿ ನೀವು ಇದನ್ನು ಮುಂಚೆಯೇ ಯಾಕೆ ಹೇಳ್ಲಿಲ್ಲ ಅಂತ ಸ್ನೇಹ ಪೂರ್ವಕವಾಗಿ ಆಕ್ಷೇಪಣೆ ಮಾಡಿ, ನಿಮಗೆ ಕೆಲಸವೇನಾದರೂ ಇದ್ದರೆ ಮುಗಿಸಿಕೊಂಡು ಅರ್ಧ ಘಂಟೆಯಲ್ಲಿ ಬನ್ನಿ ಎನ್‌ಓಸಿ ರೆಡಿಯಿರುತ್ತೆ ಅಂದ. ನನಗೆ ಬೇರೆ ಕೆಲಸವಿಲ್ಲ ಎಂದು ತಿಳಿದ ಅವನ ಸಹೋದ್ಯೋಗಿ, 'ಅವರನ್ನು ಯಾಕೆ ಕಾಯಿಸಬೇಕು? ನಾನು ರೆಕಾರ್ಡ ಚೆಕ್ ಮಾಡ್ತೇನಿ. ನೀನು ಎನ್‌ಓಸಿ ಬರಿ' ಎಂದು ಹೇಳಿ, ಇಬ್ಬರೂ ಸೇರಿ ಹತ್ತು ನಿಮಿಷದಲ್ಲಿ ನನ್ನ ಕೆಲಸ ಮಾಡಿಕೊಟ್ಟರು. ಇಬ್ಬರೂ ನನ್ನ ಕೈಹಿಡಿದು 5 ನಿಮಿಷ ಕುಲುಕಿ ಕಳಿಸಿ ಕೊಟ್ಟರು. ಒಂದು ಕಡೆ ಬೇರೆ ಊರಿನಲ್ಲಿ ನಾಗೇಶ್ವರರಾವ್, ಘಂಟಸಾಲ ಅವರನ್ನ ನೆನಪಿಗೆ ತಂದಿದಕ್ಕಾಗಿ ಅವರು ನನ್ನ ಕೆಲಸ ಮಾಡಿಕೊಟ್ಟರೆ, ಇನ್ನೊಂದು ಕಡೆ ಆ ತೆಲುಗು ಆರ್ಟಿಸ್ಟ್‌ಗಳಿಗೆ ನನ್ನನ್ನು ಇಕ್ಕಟ್ಟಿನ ಪರಿಸ್ಥಿತಿಯಿಂದ ಪಾರುಮಾಡಿದ್ದಕ್ಕೆ ನಮಸ್ಕಾರ ಮಾಡುತ್ತಾ, 'ವಸ್ತಾನು ಸಾರ್!' ಎಂದು ಹೇಳಿ ಹೊರಟೆ.

ಇನ್ನೊಂದು ಸಲ ನನಗೆ ಬೇರೆ ಭಾಷೆಯಿಂದ ಆದ ಸಹಾಯ ನಾನು ಎಂದಿಗೂ ಮರೆಯಲಾರೆ. ಇದು ಸಹಾಯಕ್ಕಿಂತಲೂ ಬಹಳಷ್ಟು ಹೆಚ್ಚು. ನಾನು ನನ್ನ ಅಣ್ಣ ಕೃಷ್ಣ ಬೊಂಬಾಯಿಯಲ್ಲಿದ್ದಾಗ ನಮ್ಮ ಮನೆಯಲ್ಲಿ ಮಂಗಳೂರಿನ ಹುಡುಗ ಕೆಲಸ ಮಾಡುತ್ತಿದ್ದ. ಅವನಿಗೆ ಇಂಗ್ಲಿಷ್ ಕಲಿಯುವುದಕ್ಕೆ ಬಹಳ ಆಸೆ. ಅದರಲ್ಲೂ ಮಾತನಾಡಬೇಕೆಂದು! ಆತ ಮೈಸೂರು ಅಸೋಸಿಯೇಷನ್ನಲ್ಲಿದ್ದ ಮೆಸ್‌ನಲ್ಲಿ ಪಾತ್ರೆ ತೊಳೆಯುವ ಕೆಲಸ ಮಾಡುತ್ತಿದ್ದ. ರಾತ್ರಿ ಬಂದು ನಮ್ಮ ಮನೆಯಲ್ಲಿ ಕೆಲಸ ಮಾಡಿದ ಮೇಲೆ ಅವನ ಪಾಠ ಶುರು. ಅವನಿಗೆ ಟೆಲಿಫೋನ್‌ನಲ್ಲಿ ಹೇಗೆ ಮಾತನಾಡಬೇಕು ಅಂತ ಕಲಿಯಲು ಆಸೆ. ನಾನು

ಅವನಿಗೆ, ಫೋನ್ ಕರೆ ಬಂದಾಗ, ರಿಸೀವರ್ ತೆಗೆದು ಕೊಂಡು, 'ಹಲೋ! ದಿಸೀಸ್ ಮೈಸೂರ್ ಅಸೋಸಿಯೇಷನ್, ಗುಡ್ ಇವ್ನಿಂಗ್, ಹೂಮ್ ಡು ಯು ವಾಂಟ್ ಪ್ಲೀಸ್, ಜಸ್ಟ್ ಎ ಮಿನಿಟ್' ಎಂದು ಮಾತನಾಡಲು ಹೇಳಿಕೊಟ್ಟಿದ್ದೆ. ಬಹಳ ಜನಕ್ಕೆ ಇದು ಆಶ್ಚರ್ಯವಾದರೂ ಈ ಬದಲಾವಣೆ ಇಷ್ಟವಾಯಿತು. ಅಲ್ಲಿ ಯಾವಾಗಲೂ ಟೆಲಿಫೋನಿನಲ್ಲಿ ಯಾರಾದರೂ ಕಾಲ್ ಮಾಡುತ್ತಲೇ ಇರುತ್ತಾರೆ. ಆದ್ದರಿಂದ ನಮ್ಮ ಹುಡುಗನಿಗೆ ಪ್ರಾಕ್ಟಿಸ್ ಮಾಡಲು ಅವಕಾಶವೇ ಇರಲಿಲ್ಲ. ನಿಜಕ್ಕೂ ಹೇಳಬೇಕೆಂದರೆ ಅದು ಯಾವಾಗಲೂ 'ಎಂಗೇಜ್' ಆಗಿರೋದು.

ಅಮೆರಿಕಾದಲ್ಲಿದ್ದ ನಮ್ಮ ಅಣ್ಣ ಮತ್ತು ಅವನ ಹೆಂಡತಿ ಮಕ್ಕಳು ಬೊಂಬಾಯಿಗೆ ಬಂದಾಗ ನಾನು ಅವರಿಗೆ ಮದ್ರಾಸಿಗೆ ಹೋಗಲು, ಟ್ರೈನಿನಲ್ಲಿ ಟಿಕೆಟ್ ಬುಕ್ ಮಾಡಿದ್ದೆ. ಮನೆಯ ಸಮೀಪದಲ್ಲೇ ದಾದರ್ ರೈಲ್ವೆ ನಿಲ್ದಾಣ ಇದ್ದಿದ್ದರಿಂದ, ನಾನು ಮತ್ತು ನನ್ನ ಅಣ್ಣ ಮಾತ್ರ ದೂರವಿದ್ದ ಸಿಎಸ್‌ಟಿ ಸ್ಟೇಷನ್ಗೆ ಲಗೇಜು ತೊಗೊಂಡು ಹೋಗಿ ಅಲ್ಲಿ ಟ್ರೇನ್ ಹತ್ತಿ ಬರುವುದು, ಮಿಕ್ಕವರೆಲ್ಲಾ ಮನೆಯ ಹತ್ತಿರ ಇರುವ ದಾದರ್ ಸ್ಟೇಷನ್ನಲ್ಲಿ ಬಂದು ರೈಲು ಹತ್ತಬೇಕೆಂದು ನಿಶ್ಕರ್ಷೆಯಾಗಿ, ನಾನು ಮತ್ತು ನನ್ನ ಅಣ್ಣ ಸಿಎಸ್‌ಟಿಗೆ ಹೊರಟೆವು. ಅಲ್ಲಿ ಹೋಗಿ ಇಳಿದ ತಕ್ಷಣ ಟ್ರೈನು ಒಂದು ಘಂಟೆ ಮುಂಚಿತವಾಗಿ ಹೊರಡಲಿದೆ ಎಂದು ಗೊತ್ತಾಯಿತು. ಅದನ್ನು ಮನೆಯವರಿಗೆ ತಿಳಿಸುವುದು ಹೇಗೆ? ಅದು ಮೊಬೈಲ್ ಕಾಲವಲ್ಲ ಟೆಲಿಫೋನ್ ಕೂಡಾ ಬಹಳ ಮನೆಗಳಲ್ಲಿ ಇರಲಿಲ್ಲ. ನನಗೆ ಅಸೋಸಿಯೇಷನ್ ಜ್ಞಾಪಕಕ್ಕೆ ಬಂತು. ಪಬ್ಲಿಕ್ ಫೋನ್ ಬೂತ್‌ಗೆ ಓಡಿದೆ. ಅಲ್ಲಿ ಇಬ್ಬರು ಬೂತನ್ನು ಕಾಲಿನಿಂದ ಒದೆಯುತ್ತಿದ್ದರು. ಅದರಿಂದ ಪೆಟ್ಟಾಗಿ ಒಬ್ಬ ಕುಂಟುತ್ತಿದ್ದ. ಅದು ಒಂದು ರೂಪಾಯಿ ನಾಣ್ಯಗಳನ್ನು ಗುಳುಂ ಗುಳುಂ ಅಂತ ನುಂಗಿ ಕನೆಕ್ಷನ್ ಮಾಡಿಸದೆ ತೆಪ್ಪಗೆ ಕೂತಿತ್ತು. ಮೂರನೆ ಫೋನ್ಗೆ ಹೋಗಿ 'ಶಿವನೇ' ಅಂತ ಪ್ರಾರ್ಥಿಸಿ, ನಾನು ಮೈಸೂರು ಅಸೋಸಿಯೇಷನ್ ನಂಬರ್ ಡಯಲ್ ಮಾಡಿದೆ. ತಕ್ಷಣವೇ ಅಲ್ಲಿಂದ 'ಹಲೋ! ದಿಸೀಸ್ ಮೈಸೂರ್ ಅಸೋಸಿಯೇಷನ್ ಗುಡ್ ಇವನಿಂಗ್! ಹೂಮ್ ಡುಯು ವಾಂಟ್ ಪ್ಲೀಸ್' ಮಾತು ಬಂತು! ನಾನು ತಕ್ಷಣವೇ , 'ಸುಬ್ಬ! ಒಂದೇ ಒಂದು ಸಲ ಹೇಳ್ತಿನಿ! ನನ್ನ ಮಾತು ಚೆನ್ನಾಗಿ ಕೇಳಿಸಿಕೊಳ್ಳಿ. ಈ ಕ್ಷಣ ಮನೆಗೆ ಟ್ಯಾಕ್ಸಿಯಲ್ಲಿ ಹೋಗಿ, ಮನೆಯಲ್ಲಿರುವವರನ್ನು ಗಾಡಿಯಲ್ಲಿ ಹಾಕಿಕೊಂಡು, ಇನ್ನು ಹತ್ತು ನಿಮಿಷದಲ್ಲಿ ದಾದರ್ ಸ್ಟೇಷನ್‌ಗೆ ಬನ್ನಿ' ಎಂದು ಕೂಗಿದೆ.

'ನೀವು ನನಗೆ ಗುಡ್ ಇವನಿಂಗ್ ಹೇಳಿ ಇಂಗ್ಲಿಷ್ನಲ್ಲಿ ಯಾರು ಬೇಕೆಂದು ಹೇಳಬೇಕಲ್ವಾ? ಆವಾಗ ನಾನು, 'ಜಸ್ಟ್ ಎ ಮಿನಿಟ್' ಅನ್ಬೇಕಲ್ವಾ..' ಆಂತ ಶುರುಮಾಡಿದ ಸುಬ್ಬ! ನಾನು, 'ಇನ್ನು ಹತ್ತೇ ನಿಮಿಷದಲ್ಲಿ ದಾದರ್‌ನಲ್ಲಿ ಅವರ ಜೊತೆ ಇರ್ಬೇಕು' ಎಂದು ಗುಡುಗಿ ಫೋನ್ ಇಟ್ಟುಬಿಟ್ಟೆ. ಟ್ರೇನ್‌ನಲ್ಲಿ ಬರುವಾಗ ಅವನಿಗೆ ಎಷ್ಟು ಅರ್ಥವಾಗಿರುತ್ತೋ ಏನು ಮಾಡ್ತಾನೋಂತ ಯೋಚನೆ.

ನಮ್ಮ ಟ್ರೇನ್ ದಾದರ್ ಸ್ಟೇಷನ್ ಸೇರಿದಾಗ ಇವರ್‍ಯಾರೂ ಬಂದಿರಲಿಲ್ಲ. ಇನ್ನೇನು ಗಾಡಿ ಸ್ಟೇಷನ್ ಬಿಡಬೇಕು, ಅಷ್ಟರಲ್ಲಿ ಬಿರುಗಾಳಿಯ ಹಾಗೆ ಇಬ್ಬರು

ಲಗೇಜನ್ನು ಕಂಪಾರ್ಟಮೆಂಟಿಗೆ ತುರುಕಿ, ಹೊರಟಿದ್ದ ರೈಲ್ವೆ ಡಬ್ಬಿಗೆ ನಮ್ಮ ಅಣ್ಣನ ಕುಟುಂಬದವರನ್ನ ಒಬ್ಬಬ್ಬರನ್ನಾಗಿ ಹತ್ತಿಸಿದರು!

ಅವರು ಹೋದ ಮೇಲೆ ದೊಡ್ಡ ಬೆಟ್ಟ ತಲೆಯಿಂದ ಕೆಳಗೆ ಇಳಿಯಿತಲ್ಲ ಅಂದು ಕೊಳ್ಳುವಾಗ, ಸುಬ್ಬ ನನಗೆ, 'ನೀವು ಫೋನಿನಲ್ಲಿ ಇವತ್ತು ಬೇರೆ ಏನೇನೋ ಕನ್ನಡದಲ್ಲಿ ಮಾತನಾಡಿಬಿಟ್ಟರಿ. ಅದನ್ನು ಇಂಗ್ಲಿಷಿನಲ್ಲಿ ನನಗೆ ಯಾವಾಗ ಹೇಳಿಕೊಡ್ತೀರಾ' ಅಂತ ಕೇಳಿದಾಗ, ದೇವ್ರ ಹಾಗೆ ಆಪತ್ಬಾಂಧವನ ಹಾಗೆ ಬಂದಿದ್ದಕ್ಕಾಗಿ ನಾನು ಅವನನ್ನು ತಬ್ಬಿಕೊಂಡೆ.

ಆ ಹುಡುಗ, ಸುಬ್ಬ, ಮುಂದೆ ಲಿಫ್ಟ್ ಕಂಪನಿಯಲ್ಲಿ ದಿನಗೂಲಿಯಾಗಿ ಭಾರದ ಸಾಮಾನುಗಳನ್ನು ಹೊರುವ ತಾತ್ಕಾಲಿಕ ಕೆಲಸದಲ್ಲಿ ಸೇರಿ, ಅಲ್ಲೇ ಲಿಫ್ಟಿನ ಕೆಲಸವನ್ನು ಚೆನ್ನಾಗಿ ಕಲಿತು, ದೋಹ ಕಥಾರ್ ನಲ್ಲಿ ಸರ್ವಿಸ್ ಸೂಪರ್ವೈಸರ್ ಆಗಿ, ಇಂಡಿಯಾಗೆ ವಾಪಸ್ಸು ಬಂದು ಮುಂಬೈನಲ್ಲಿ ಉದ್ಯಮಿಯಾಗಿ ಬೇರೆಯವರನ್ನು ಕೆಲಸಕ್ಕಿಟ್ಟುಕೊಂಡು ಕಂಪನಿ ನಡೆಸುತಿದ್ದಾನೆ! ಇಂಗ್ಲಿಷ್ ಕಲಿಯಲೇ ಬೇಕೆಂದು ಆಸೆ ಇಟ್ಟಿದ್ದ ಸುಬ್ಬನ ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರೂ ಸಾಫ್ಟ್ ವೇರ್ ಮತ್ತು ಎಂಬಿಎ ಮಾಡಿ ಮುಂಬೈಯಲ್ಲಿ ಕೆಲಸ ಮಾಡುತ್ತಿದ್ದಾರೆ.

## ಆರೋಗ್ಯದ ಗುಟ್ಟು

ತಾತನ 100ನೇ ಹುಟ್ಟುದ ಹಬ್ಬ. ಎಲ್ಲರೂ ಅವರನ್ನು ಅಭಿನಂದಿಸುವವರೇ. 'ಏನು ನಿಮ್ಮ ಆರೋಗ್ಯದ ಗುಟ್ಟು?' ಒಬ್ಬ ಕೇಳಿದ. ತಾತ ಹೇಳಿದರು: 'ನಮ್ಮ ಮದುವೆ ಆಗಿ 75 ವರ್ಷಗಳಾದವು. ಮದುವೆಯ ದಿನ ನಾವೊಂದು ಒಪ್ಪೊಂದಕ್ಕೆ ಬಂದೆವು. ಅದೇನೆಂದರೆ ನಮ್ಮಿಬ್ಬರ ನಡುವೆ ಜಗಳವಾದರೆ ಯಾರ ತಪ್ಪಿದೆಯೋ ಅವರು 5 ಕಿಮೀ ವಾಕಿಂಗ್ ಹೋಗಬೇಕು. ನಾನು ಈ 75 ವರ್ಷಗಳಲ್ಲಿ ಅದೆಷ್ಟು ಬಾರಿ ಹಾಗೆ ವಾಕಿಂಗ್ ಹೋಗಿದ್ದೇನೋ ಗೊತ್ತೇ ಇಲ್ಲ.' 'ಮತ್ತೆ ನಿಮ್ಮ ಪತ್ನಿ ಸಹ ಅಷ್ಟೇ ಆರೋಗ್ಯವಾಗಿದ್ದಾರಲ್ಲ? ಅದರ ಗುಟ್ಟು ಏನು?' ಎಂದು ಇನ್ನೊಬ್ಬರು ಕೇಳಿದರು. 'ಅದು ಇನ್ನೊಂದು ಗುಟ್ಟು. ನಾನು ಐದು ಕಿಮೀ ನಡೆಯುತ್ತೇನೋ ಅಥವಾ ಪಾರ್ಕಿನಲ್ಲಿ ಕುಳಿತಿರುತ್ತೇನೋ ಎಂದು ಚೆಕ್ ಮಾಡಲು ಅವಳ ನನ್ನನ್ನು ಹಿಂಬಾಲಿಸುತ್ತಿದ್ದಳು' ಎಂದು ತಾತ ವಿವರಿಸಿದರು.

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ✓ ಆಟದ ಸಾಮಾನಿನ ಅಂಗಡಿಯ ಹೆಸರು: ಆಡಿಸಿ ನೋಡು
- ✓ ಉನ್ನತ ಶಿಕ್ಷಣ ಪಡೆದವರಲ್ಲಿ ಅನೇಕರು ಉನ್ನತ ಶಿಕ್ಷಣ ಪಡೆದವರಲ್ಲ, ದುಬಾರಿ ಶಿಕ್ಷಣ ಪಡೆದವರಾಗಿರುತ್ತಾರೆ.
- ✓ ಮಕ್ಕಳು ಓದುತ್ತಿಲ್ಲ ಓದುತ್ತಿಲ್ಲ ಎಂದು ದೂರುವ ತಂದೆತಾಯಿಗಳು ಮೊದಲು ತಾವೆಷ್ಟು ಓದಿಕೊಂಡಿದ್ದೇವೆ ಎಂಬುದನ್ನು ಅರಿಯಬೇಕು. ತಾವು ಓದಿದ ಪುಸ್ತಕಗಳ ಸಾರಾಂಶವನ್ನು ಮಕ್ಕಳಿಗೆ ಹೇಳತೊಡಗಿದರೆ ತಾನಾಗಿಯೇ ಮಕ್ಕಳಲ್ಲಿ ಆಸಕ್ತಿ ಮೂಡುತ್ತದೆ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ✓ ಬಿ ಹ್ಯಾಪಿ ಟು ಬಿ ಅಲೋನ್, ಬಿ ಅಲೋನ್ ಟು ಬಿ ಹ್ಯಾಪಿ.
- ✓ ಕನಸು ಕಾಣೋದು ಬೇರೆ, ಕನಸು ಬೀಳೋದು ಬೇರೆ.
- ✓ ವಿದ್ಯುದಾಲಂಗನೆಗೆ ಸಿಕ್ಕಿ ಸತ್ತಿದೆ ಕಾಗೆ ತಪ್ಪು ಮಾಡದ ವ್ಯಕ್ತಿ ಶಿಕ್ಷೆ ಪಡೆಯುವ ಹಾಗೆ
- ✓ ನೀವು ಪ್ರಾರಂಭಿಸಿಯೇ ಇಲ್ಲದಿದ್ದರೆ ಗೆಲ್ಲುವುದೇ ಇಲ್ಲ.
- ✓ ಎಲ್ಲರೂ ಹಾಕುವ ಮಸಾಲೆ ಒಂದೇ. ಆದರೆ ಅಮ್ಮ ಒಂದು ಮುಷ್ಟಿ ಪ್ರೀತಿ ಹಾಕಿರುತ್ತಾಳೆ. ಹಾಗಾಗಿ ಅವಳು ಏನೇ ಮಾಡಿದರೂ ಅದು ರುಚಿಕರ.
- ✓ ಲೈಫ್ ಈಸ್ ಲೈಕ್ ಐಸ್‌ಕ್ರೀಂ, ರೆಲಿಷ್ ಇಟ್ ಬಿಫೋರ್ ಇಟ್ ಮೆಲ್ಟ್ಸ್.
- ✓ ಅಂಬಾನಿಯ ಪ್ರಾರ್ಥನೆ: ದೇವರೇ, ನಿನಗೆ ಏನಾದರೂ ಬೇಕಿದ್ದರೆ ಕೇಳು..
- ✓ ಅಂದು ಅಧಿಕಾರ ಚಲಾಯಿಸಲು ಆಂಗ್ಲರು ಕಲಿತಿದ್ದು ಕನ್ನಡ. ಇಂದು ಆಂಗ್ಲಭಾಷೆ ಕಲಿಯಲು ಬೇಡವಾಗುತ್ತಿದೆ ಕನ್ನಡ.
- ✓ ಕಷ್ಟಗಳನ್ನು ಸಹಿಸೋದಲ್ಲ, ಎದುರಿಸಬೇಕು.
- ✓ ಯು ಕೆನಾಟ್ ಕಂಟ್ರೋಲ್ ಅದರ್ ಪೀಪಲ್, ಬಟ್ ಯು ಕೆನ್ ಕಂಟ್ರೋಲ್ ಯುವರ್ ಸೆಲ್ಫ್. ಸೊ ಡು ದಟ್.
- ✓ ದೇವರು ಕಾನೂನನ್ನು ಮಾಡಿದರೆ ಅದನ್ನು ಅವನೂ ಪಾಲಿಸುವನೆ?
- ✓ ಜನ ನಿಮ್ಮ ಹಿಂದೆ ಬಿದ್ದಿದ್ದಾರೆ ಎಂದರೆ ನೀವು ಮುಂದೆ ಇದ್ದೀರಿ ಎಂದರ್ಥ.
- ✓ ಗೆದ್ದರೆ ಗೆಲ್ಲಬೇಕು ಬಾಹುಬಲಿಯಂತೆ, ಬಿಟ್ಟು ಕೊಡುವುದರಿಂದ.

# ಅಮೆರಿಕಾ ಅಮೆರಿಕಾ

**– ಪಾಲಹಳ್ಳಿ ವಿಶ್ವನಾಥ್**

ಗಂಡ ಹೋದ ಮೇಲೆ ಮಲೆನಾಡಿನ ಅವರ ಜಮೀನನ್ನು ಕಾವೇರಮ್ಮನವರೊಬ್ಬರೇ ನೋಡಿಕೊಳ್ಳುತ್ತಿದ್ದರು. ಇರುವನೊಬ್ಬ ಮಗ. ಶ್ರೀನಿವಾಸ. ಅವನು ಅಲ್ಲೇ ಇದ್ದು ಎಲ್ಲ ನೋಡಿಕೊಳ್ಳುತ್ತಾನೆ ಎಂದುಕೊಂಡಿದ್ದರು. ಆದರೆ ಮಗ ಕೇಳದೆ ದೂರದ ಬೆಂಗಳೂರಿಗೆ ಹೋಗಿ ಇಂಜನಿಯರಿಂಗ್ ಕಾಲೇಜಿಗೆ ಸೇರಿದ್ದ. ನಾಲ್ಕು ವರ್ಷಗಳನ್ನು ಕೂಡಾ ಮುಗಿಸಿದ್ದ. ಇನ್ನೇನು ಬಂದು ಬಿಡುತ್ತಾನೆ ಎಂದು ಕೊಂಡು ಅವನಿಗೆ ಹುಡುಗಿಯನ್ನೂ ನೋಡುತ್ತಿದ್ದರು.

ಒಂದು ದಿನ ಮಧ್ಯಾಹ್ನದ ಹೊತ್ತು. ಜಗಲಿಯ ಮೆಲೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಗುಮಾಸ್ತೆ ಸುಬ್ಬಣ್ಣ ಒಂದು ಪತ್ರ ತಂದುಕೊಟ್ಟರು. ಕನ್ನಡಕ ಹಾಕಿಕೊಂಡು ಮಗನ ಪತ್ರ ಓದುತ್ತಾ ಓದುತ್ತಾ ಕಾವೇರಮ್ಮನವರಿಗೆ ತಲೆಯ ಮೆಲೆ ಆಕಾಶ ಬಿದ್ದಂತಾಯಿತು: 'ಅಮೆರಿಕದ ವಿಶ್ವವಿದ್ಯಾಲಯದಲ್ಲಿ ಓದಲು ಸ್ಕಾಲರ್ಶಿಪ್ ಸಿಕ್ಕಿದೆ. ಇನ್ನು ಮೂರು ತಿಂಗಳಲ್ಲಿ ಹೊರಡಲೇ ಬೇಕು 'ಎಂದು ಶ್ರೀನಿವಾಸ ಬರೆದಿದ್ದ. ಶಿವಮೊಗ್ಗ ಜಿಲ್ಲೆಯನ್ನೇ ಬಿಡದಿದ್ದ ಕಾವೇರಮ್ಮ ಮಗನನ್ನು ಬೆಂಗಳೂರಿಗೆ ಕಳಿಸಲೇ ಮೀನಮೇಷ ಎಣಿಸಿದ್ದರು. ಈಗ ಅಮೆರಿಕ ಎನ್ನುವ ಪದ ಕೇಳಿ ತಲೆ ಸುತ್ತಿ ಬರುವಂತಾಗಿತ್ತು. ಏನು ಮಾಡಬೇಕು ಎಂದು ಯೋಚಿಸುತ್ತಿದ್ದಾಗ ಸುಬ್ಬಣ್ಣ ಗುರುಗಳನ್ನು ನೋಡಿಕೊಂಡು ಬರೋಣ ಎಂದರು. ಮಾರನೆಯ ದಿನ ಬೆಟ್ಟ ಹತ್ತಿ ಗುರುಗಳನ್ನು ಭೇಟಿಮಾಡಿ ವಿಷಯವನ್ನು ತಿಳಿಸಿ ಏನಾದರೂ ಮಾಡಿ ಮಗನನ್ನು ಅಮೆರಿಕದ ಪ್ರಯಾಣದಿಂದ ನಿಲ್ಲಿಸಿ ಎಂದು ಬೇಡಿಕೊಂಡರು. ಅದಕ್ಕೆ ಗುರುಗಳು ಹೇಳಿದರು "ಹೌದು, ಮಾಡಬಲ್ಲೆ. ಆದರೆ ನೀವು ಶಿವಮೊಗ್ಗಕ್ಕೆ ಹೋಗಿ ಅಲ್ಲಿನ ಧನ್ವಂತರಿ ರಸ್ತೆಯ ಯಾವುದಾದರೂ ಒಂದು ಮನೆಯಿಂದ ಐದು ಸಾಸುವೆ ಕಾಳು ತೆಗೆದುಕೊಂದು ಬರಬೇಕು.. ನಿಲ್ಲಿ! ಆದರೆ ಒಂದು ಷರತ್ತು. ಆದರೆ ಆ ಮನೆಯಿಂದ ಯಾರೂ ಅಮೆರಿಕಕ್ಕೆ ಹೋಗಿರಬಾರದು"

ಕಾವೇರಮ್ಮನವರು ಭಾನುವಾರ ಬೆಳಿಗ್ಗೆ ಸುಬ್ಬಣ್ಣನವರ ಜೊತೆ ಬಸ್ ಹತ್ತಿ ಶಿವಮೊಗ್ಗಕ್ಕೆ ಹೋಗಿ ಅಲ್ಲಿಯ ಧನ್ವಂತ್ರಿ ರಸ್ತೆಗೆ ಹೋದರು. ರಸ್ತೆಯ ಮೊದಲ ಮೂರು ಮನೆಗಳಿಗೂ ಬೀಗ ಬಡಿದಿದ್ದು ನಾಲ್ಕನೆ ಮನೆಯ ಬೆಲ್ ಒತ್ತಿದರು. ಮನೆಯಾಕೆ ಬಂದು "ಏನು ಬೇಕು?" ಎಂದು ವಿಚಾರಿಸಿದರು . "ಏನಿಲ್ಲ, ನನಗೆ ಹತ್ತು ಕಾಳು ಸಾಸುವೆ ಬೇಕು?" ಎಂದು ಕೇಳಿದಾಗ "ಏನು ಒಗ್ಗರಣೆ ಹಾಕ್ತಾ ಇದ್ದೀರಾ? ಸಾರಿಗಾ? ಹತ್ತು ಕಾಳಲ್ಲಿ ಏನಾಗುತ್ತೆ. ಇಪ್ಪತ್ತು ಕೊಡ್ತೀನಿ ತೆಗೆದುಕೊಂಡುಹೋಗಿ. ನೀವು ಯಾರು? ನಿಮ್ಮನ್ನು ನೋಡಿಲ್ಲವಲ್ಲ? ಹೊಸಬರಾ? ಯಾವಾಗ ನಮ್ಮ ಬೀದಿಗೆ ಬಂದಿರಿ?". ಈ ಪ್ರಶ್ನೆಗಳ ಸಾಲಿಗೆ ಉತ್ತರ ಕೊಡುವ ಮುಂಚೆಯೇ ಅಕೆ ಅಡಿಗೆ ಮನೆಗೆ ಹೋಗಿ ಒಂದು ಪುಟ್ಟ

ಬಟ್ಟಲಿನಲ್ಲಿ ಸಾಸುವೆಕಾಳು ತಂದರು. ಅದನ್ನು ತೆಗೆದುಕೊಳ್ಳುವ ಮುಂಚೆ ಕಾವೇರಮ್ಮ ಕೇಳಿದರು.

"ನಿಮ್ಮ ಮನೆಯಲ್ಲಿ ಯಾರೂ ಅಮೆರಿಕಾ ದೇಶಕ್ಕೆ ಹೋಗಿಲ್ಲ ತಾನೆ?"

ಅದನ್ನು ಕೇಳಿದ ತಕ್ಷಣ ಆಕೆ ಬಟ್ಟಲನ್ನು ಕೆಳಗೆ ಇಟ್ಟು ಜೋರಾಗಿ ಅಳಲು ಶುರುಮಾಡಿದರು. ಕಾವೇರಮ್ಮ

"ಏಕಮ್ಮ? ಏಕೆ?"

"ಆ ಹಾಳು ಅಮೆರಿಕ! ನನ್ನ ಇಬ್ಬರು ಮಕ್ಕಳನ್ನೂ ಕರೆಸ್ಕೊಂಬಿಟ್ಟಿದೆ"

"ಅಂದರೆ"

"ಹೌದು, ಇಪ್ಪತ್ತು ವರ್ಷಗಳ ಹಿಂದೆ ಮೊದಲನೆ ಮಗ ಹೋದ, ಅಲ್ಲಿಯೇ ಉತ್ತರದ ಕಡೆಯ ಹೆಣ್ಣನ್ನು ಮದುವೆಯಾದ. ಸದ್ಯ ನಮ್ಮ ದೇಶದವಳು ಅಂತ ತೃಪ್ತಿ ಪಟ್ಟಿಕೊಳ್ಳಬೇಕು. ಆಮೇಲೆ ಹತ್ತು ವರ್ಷಗಳ ಹಿಂದೆ ಎರಡನೆಯವನನ್ನು ಕರೆಸಿಕೊಂಡ .. ಮದುವೇನೂ ಇಲ್ಲಿಂದ ಮಾಡಿಯೆ ಕಳಿಸಿದೆ. ಆದರೆ ಆಕೆ ಅಲ್ಲಿಯವರಿಗಿಂತ ಹೆಚ್ಚಾಗಿ ಆಡ್ತಾಳೆ' . ಆಟೋ ರಿಕ್ಷಾಲೂ ಓಡಾಡೋಲ್ಲ."

"ಬಂದು ನಿಮ್ಮನ್ನು ನೋಡೋಲ್ವೆ?

"ಬರ್ತಾರೆ, ಒಂದೆರಡು ದಿನ ಇದ್ದು ಹೋಗ್ತಾರೆ. ನನ್ನನ್ನು ನೋಡೋಕೆ ಬರ್ತಾರೆ ಅಂದುಕೊಂಡಿರಾ? ಇಲ್ಲ, ಯಾವುದೋ ಹಣಕಾಸು ವ್ಯವಹಾರ ಇಟ್ಟುಕೊಂಡಿದಾರೆ"

ಕಾವೇರಮ್ಮ ಬೀಗ ಹಾಕಿದ ಮನೆಗಳ ಬಗ್ಗೆ ಕೇಳಿದರು. "ನನ್ನ ಗೋಳೆ ಅಲ್ಲೂ! ಮಕ್ಕಳೆಲ್ಲಾ ಅಮೆರಿಕದಲ್ಲಿ ಇದ್ದಾರೆ, ದೊಡ್ಡವರೆಲ್ಲಾ ವೃದ್ಧಾಶ್ರಮಗಳಲ್ಲಿ" ಎನ್ನುವ ಉತ್ತರ ಬಂದಿತು.

ಮನೆಯಿಂದ ಹೊರಬಂದ ಕಾವೇರಮ್ಮ "ಏಕೋ ಹೆದರಿಕ್ ಅಗುತ್ತಲ್ವಾ ಸುಬ್ಬಣ್ಣ" ಎಂದು ದುಗುಡದ ಮನಸ್ಸಿನಿಂದ ಮುಂದೆ ನಡೆದರು. ಮತ್ತೆ ಮುಂದಿನ ಮೂರು ಮನೆಗಳಿಗೂ ಬೀಗ ಹಾಕಿತ್ತು. ಕಡೆಗೂ ಒಂದು ಬೀಗ ಹಾಕದಿದ್ದ ಮನೆ ಸಿಕ್ಕಿತು. ಗೇಟು ತೆಗೆದು ಒಳಗೆ ಹೋದಾಗ ಮನೆಯಿಂದ ಯಾರೋ ಹೊರ ಬಂದರು: ಒಬ್ಬ ಬಿಳಿಯ ತರುಣಿ! ನಗುತ್ತಲೇ 'ಒಳಗೆ ಬನ್ನಿ' ಎಂದು ಕನ್ನಡದಲ್ಲೇ ಕಷ್ಟಪಟ್ಟಿಕೊಂಡು ಹೇಳಿದಳು. ಒಳಗೆ ಬಂದಾಗ ಮನೆಯಾಕೆ ಅವರನ್ನು ಸ್ವಾಗತಿಸಿ "ಏನು" ಎಂದು ಕೇಳಿದಾಗ ಕಾವೇರಮ್ಮ ವರದಿ ಒಪ್ಪಿಸಿದರು. "ಸಾರಿ, ನಿಮಗೆ ಸಹಾಯ ಮಾಡೊಕೆ ಆಗೊಲ್ಲ. ನನ್ನ ಮಗ ಐದು ವರ್ಷದ ಹಿಂದೆ ಹೋದ. ಅಲ್ಲೇ ಮದುವೇನೂ ಮಾಡಿಕೊಂಡ. ನೋಡಲಿಲ್ಲವೆ ನನ್ನ ಸೊಸೇನ! ಚಿನ್ನದಂತಹ ಹುಡುಗಿ. ಇಲ್ಲಿ ಹುಡುಕಿದ್ದರೂ ಇಷ್ಟು ಒಳ್ಳೆ ಹುಡುಗಿ ಸಿಗುತ್ತಿರಲಿಲ್ಲ "ಸರಿ, ಏಕೋ ಕೆಲಸವೇ ಅಗ್ತಾ ಇಲ್ಲವಲ್ಲ ಎಂದುಕೊಂಡು ಕಾವೇರಮ್ಮ ಹೊರಟರು. ಹೊರಡುವ ಮುಂಚೆ ಬೀಗ ಹಾಕಿದ್ದ ಮನೆಗಳ ವಿಷಯ ಕೇಳಿದರು. ಮಕ್ಕಳೆಲ್ಲಾ ಅಮೆರಿಕದಲ್ಲಿ ಇದ್ದಾರೆಂಬ ಉತ್ತರ ಬಂದಿತು. ದೊಡ್ಡವರು ಎಂಬ ಪ್ರಶ್ನೆಗೆ

ಅವರೆಲ್ಲಾ ಆ ಮಕ್ಕಳ ಜೊತೆಯೇ ಇದ್ದಾರೆ ಎಂದು ಗೊತ್ತಾಯಿತು.

ಅಂತೂ ಸಾಲಿನಲ್ಲಿ ಕಡೆಯ ಮನೆ. ಸರಿ, ಕಡೆಯ ಅವಕಾಶ ಎಂದೇ ಕಾವೇರಮ್ಮ ಒಳಗೆ ಹೋದರು.

ಮನೆಯ ಇಬ್ಬರು ಮಕ್ಕಳೂ ಇಲ್ಲೇ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಯಿತು. ಸದ್ಯ, ಕಡೇಗೂ ಸಾಸುವೆ ಕಾಳು ಸಿಗುತ್ತೆ ಅಂತ ಕಾವೇರಮ್ಮನವರಿಗೆ ಹರ್ಷವಾಯಿತು ಆದರೆ ಮನೆಯವರು" "ಅಯ್ಯೋ, ಏನು ಮಾಡೋಣ? ನಾವು ಕಾಶಿಗೆ ಹೋಗಿದ್ದಾಗ ಸಾಸುವೆ ಬಿಟ್ಟು ಬಂದೆವಲ್ಲ. ನಾವು ಯಾವುದಕ್ಕೂ ಸಾಸುವೆ ಒಗ್ಗರಣೆ ಹಾಕುವುದಿಲ್ಲ" ಎಂದುಬಿಟ್ಟರು.

ಮಾರನೆಯ ದಿನ ಬೆಟ್ಟದ ಮೇಲಿನ ಮಠಕ್ಕೆ ವಾಪಸ್ಸು ಬಂದು ಕಾವೇರಮ್ಮ ಗುರುಗಳಿಗೆ ನಮಸ್ಕಾರ ಮಾಡಿದರು." ಏನು ತಾಯಿ, ಸಾಸುವೆ ಕಾಳು ಸಿಗಲಿಲವೇ" ಎಂದು ಗುರುಗಳು ಕೇಳಿದ್ದಕ್ಕೆ "ಸ್ವಾಮಿ ನಿಮಗೆ ಗೊತ್ತಿಲ್ಲದ್ದು ಏನಿದೆ?. ನನ್ನ ಹಣೆ ಬರಹ. ಶ್ರೀನಿವಾಸನ್ನ ಯಾಕೆ ನಿಲ್ಲಿಸಲಿ? ಆದರೆ ಒಬ್ಬನ್ನೇ ಕಳಿಸೋಲ್ಲ. ನಾನೂ ಅವನ ಜೊತೆ ಹೋಗುತ್ತೀನಿ.. ಆಶೀರ್ವಾದ ಮಾಡಿ" ಎಂದು ಕಾವೇರಮ್ಮ ಗುರುಗಳಿಗೆ ನಮಸ್ಕಾರ ಮಾಡಿ ಮನೆಗೆ ವಾಪಸ್ಸು ಹೊರಟರು.


**ಪುಸ್ತಕ ಪರಿಚಯ**




**ಸಮಗ್ರ ಹಾಸ್ಯ**
**(120 ಹಾಸ್ಯ ಲೇಖನಗಳ ಸಂಗ್ರಹ)**
**ಬೇಲೂರು ರಾಮಮೂರ್ತಿ**
ಪುಟಗಳು 12+554+4
ಬೆಲೆ: ರೂ. 400/–

**ಬೆಟ್ಟದ ಭಾಗೀರಥಿ ಮತ್ತು ಇತರ ಪ್ರಬಂಧಗಳು**
**ಭುವನೇಶ್ವರಿ ಹೆಗಡೆ**
ಪುಟಗಳು 188+4 ಬೆಲೆ: ರೂ.135/–
ಪ್ರತಿಗಳಿಗೆ ಸಂಪರ್ಕಿಸಿ
ಪ್ರಕಾಶಕರು, ತೇಜು ಪಬ್ಲಿಕೇಷನ್ಸ್, 233, 7ನೇ ಎ ಅಡ್ಡ ರಸ್ತೆ, ಶಾಸ್ತ್ರಿ ನಗರ – ಬೆಂಗಳೂರು 560 028.
ದೂ. 9448050463



ಕಾಮನ್ ರೂಮ್ ಕಹಾನಿ

# ನಾಟಿಕೋತ್ಸವ!

– ಗಣೇಶ ಹೆಗ್ಗಡೆ

**ಕೊಂಚವೂ ಕಾಮನ್ ಸೆನ್ಸೆ ಬೇಡವೆ ಎಂದು ರಾಯರು ನನ್ನ ಮೇಲೆ ರೇಗಿದ್ದೇಕೆ?**

ಮೊನ್ನೆ ಭೀಮನ ಅಮಾವಾಸ್ಯೆಯ ದಿನ ನನ್ನ ಧರ್ಮಪತ್ನಿ ಪದ್ದಿ ಉರುಫ್ ಪದ್ಮಾವತಿ, ಗಂಡನಾದ ನನ್ನ ಪಾದಾರವಿಂದಗಳಿಗೆ ನಮಸ್ಕಾರ ಮಾಡಲೆಂದು ಪಾದಗಳನ್ನು ಸ್ಪರ್ಶಿಸಿ ಯಾಕೊ ಬೆಚ್ಚಿಬಿದ್ದಳು.

'ರ್ರೀ.. ಇದೇನ್ರಿ ಹಿಂಗೆ ನಿಮ್ಮ ಪಾದ ಸಿಕ್ಕಾಪಟ್ಟೆ ಸುಡ್ತಾಯಿದೆ. ಜ್ವರವಿದೆಯೇನ್ರಿ? ಈ ಪರಿಸ್ಥಿತೀಲಿ ನಿಮ್ಮೊಬ್ಬರನ್ನೇ ರಾಮಾಪುರಕ್ಕೆ ನಾಳೇ ಹ್ಯಾಗ್ರಿ ಕಳುಹಿಸ್ಲಿ? ಕೆಸರು ಗದ್ದೇಲಿ ಇಳಿಯೊ ಭಯದಿಂದ ಹೀಗೆ ಜ್ವರ ವಕ್ರಸ್ಕೊಂಡು ಇದೆಯೇನ್ರಿ? ಎಂದು ತುಂಬ ಅಲವತ್ತುಕೊಂಡಳು. ಪದ್ದಿಯ ಗೆಸ್ಸು ಕರೆಕ್ಟಾಗೇ ಇತ್ತು ಅನ್ನಿ. ಒಂದು ವಾರದ ಹಿಂದೆ, ಕೌರವಪುರದ ನಮ್ಮ ಸರ್ಕಾರಿ ಕಚೇರಿಗೆ ಒಂದು ಸುತ್ತೋಲೆ ಬಂದು, ಭೀಮನ ಅಮಾವಾಸ್ಯೆಯ ಮುಂದಿನ ದಿನ ಮಾನ್ಯ ಜಿಲ್ಲಾ ಮಂತ್ರಿಗಳು ಕೌರವಪುರ ತಾಲ್ಲೂಕಿನ ಕುಗ್ರಾಮವಾದ ರಾಮಪುರದ ಹೊರವಲಯದಲ್ಲಿರುವ ಶ್ರೀಮತಿ ತಿಮ್ಮಮ್ಮ ಎಂಬುವವರ ಭತ್ತದ ಗದ್ದೆಯಲ್ಲಿ ನಾಟಿಕೋತ್ಸವ ಎಂಬ ಪೈರು ನೆಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆಂದೂ, ಖುದ್ದಾಗಿ ಮಂತ್ರಿಗಳೇ ಕೆಸರು ಗದ್ದೆಗೆ ಇಳಿಯುತ್ತಾರೆಂದೂ, ತಾಲ್ಲೂಕಿನ ಸರ್ಕಾರಿ ವಿವಿಧ ಇಲಾಖೆಗಳ ಮುಖ್ಯಸ್ಥರು ಸ್ವತಃ ಹಾಜರಿದ್ದು, ಈ ಕಾರ್ಯಕ್ರಮವನ್ನು ಯಶಸ್ವೀಗೊಳಿಸಬೇಕೆಂದು ಆಜ್ಞಾಪಿಸಲಾಗಿತ್ತು.

ಮೊನ್ನೆ ತಾನೆ ಗದ್ದುಗೆ ಏರಿದ ಮಾನ್ಯಮಂತ್ರಿಗಳು ಅಚಾನಕ್ಕಾಗಿ ಗದ್ದೆಗಿಳಿಯುವ ಈ ದುಸ್ಸಾಹಸಕ್ಕೆ ಯಾಕಿಳಿದಿದ್ದಾರೆಂದು, ಆ ಕ್ಷಣ ನನಗೆ ತಿಳಿಯದಾಯಿತು. ಸರಿಯಾಗಿ ಹಳ್ಳಿಯ ಪರಿಚಯವೇ ಇರದ ನನ್ನಂಥಹ ನಗರ ಪ್ರಾಣಿಗೆ ತೀವ್ರ ಆತಂಕವೇ ಆಯ್ತು. ಹೆಚ್ಚೂ ಕಮ್ಮಿ ಪದ್ದಿ ಬೆಳಗಿನಿಂದ ರಾತ್ರಿಯವರೆಗೂ ನನಗೆ ಧೈರ್ಯ ತುಂಬುವ ಪ್ರಮೇಯವೂ ಒದಗಿಬಂತು. ಗ್ಲೂಕೋಮೀಟರ್ರಿನಲ್ಲಿ ನನ್ನ ಷುಗರ್ ಚೆಕ್ ಮಾಡಿದ ಪದ್ದಿ ಗಾಬರಿ ಮುಖ ಮಾಡಿಕೊಂಡು,

'ರ್ರೀ ಸುತ್ತೋಲೇನ ಸರಿಯಾಗಿ ಓದಿದಿರೇನ್ರಿ? ಮುದ್ರಣದೋಷದಿಂದ 'ನಾಟಕೋತ್ಸವ' ಬದ್ಲು 'ನಾಟಿಕೋತ್ಸವ' ಎಂದು ಕಂಪ್ಯೂಟರಿನಲ್ಲಿ ತಪ್ಪಾಗಿ ಟೈಪ್ ಆಗಿರ್ಬೇಕು ಎಂದು ಸಮಾಧಾನ ಪಡಿಸಲೆತ್ನಿಸಿದಳು.

"ಛೇ ಸರಿಯಾಗೇ ಎರ್ಡೆರ್ಡು ಸಲ ಕಣ್ಣು ಹಾಯಿಸ್ದೆ ಕಣೆ, 'ನಾಟಿಕೋತ್ಸವ' ಅಂತಾನೇ ಇದೆ. ಕಂಟೆಂಟ್ಸಿನಲ್ಲಿ ಕೆಸರುಗದ್ದೆ, ನಾಟಿ,

ಮಂತ್ರಿಗಳು.. ಅಂತೆಲ್ಲಾ ಇದೆ' ಎಂದು ಸಮಜಾಯಿಷಿ ನೀಡಿದಾಗ, ಪದ್ದಿಯೂ ಯಾಕೊ ಮಂಕಾದಳು. ಹಿಂದಿನ ದಿನ ರಾತ್ರಿ ಯಾಕೊ ನನಗೆ ನಿದ್ರೆಯೆ ಹತ್ತಲೊಲ್ಲದು. ಪದ್ದಿ ನನ್ನ ತಲೆ ಬಳಿ ಕುಳಿತು, 'ಕೆಸರಿನ ಗದ್ದೆಗಿಳಿಯುವ ಮುನ್ನ ಕೊಂಚ ಹುಷಾರೂರಿ, ಬಹಳ ಜಾರುತ್ತೆ, ನೆನಪಿದೆಯೆ ನಿಮ್ಗೆ? ಹಿಂದೊಮ್ಮೆ ನಮ್ಮೂರಿನಲ್ಲಿ ಅಪ್ಪನ ಗದ್ದೆಯಲ್ಲಿ ತೆವರಿ ಮೇಲೆ ನಡೆಯುವಾಗ ಹ್ಯಾಗೆ ಜಾರಿ ಬಿದ್ದುಬಿಟ್ರಿ. ಆಮೇಲೆ ಒಂದ್ವಾರ ತೆವಳ್ಕೊಂಡೇ ಓಡಾಡ್ತಿದ್ರಿ. ಆಗ ವಕ್ಕರಿಸ್ಕೊಂಡಿರೊ ಹಾಳು ಬೆನ್ನು ನೋವು ಇನ್ನೂ ಕಡಿಮೆಯಾಗಿಲ್ಲ ನಿಮ್ಗೆ. ನೀವೇನು ತಿಳ್ಕೊಳ್ಳದೆ ಹೋದ್ರೆ, ನಿಮ್ಜೊತೆ ನಾನೂ ಬರ್ತೀನ್ರೀ, ಆ ಗದ್ದಲದಲ್ಲಿ ಯಾರಿಗೂ ಗೊತ್ತಾಗುಲ್ಲಾ' ಎಂದಳು.

"ಹಾಗಾಗುಲ್ಲ ಪದ್ದಿ, ನಾಟಿ ಕೆಲಸಕ್ಕೆ ಇನ್ನೂರು ಜನ ಹಳ್ಳಿ ಹೆಂಗಸರನ್ನು ಆರಿಸಿಕೊಂಡಿದ್ದಾರೆ. ಮಂತ್ರಿಗಳ ಸೆಕ್ಯೂರಿಟಿಗೋಸ್ಕರ ಅವರಿಗೆಲ್ಲಾ ಐಡೆಂಟಿಟಿ ಕಾರ್ಡು ವಿತರಿಸಿದ್ದಾರೆ. ನೀನು ಬಂದರೆ ಆಭಾಸವಾಗುತ್ತದೆ. ಜತೆಗೆ ನನ್ನ ಕೊಲೀಗ್ಸು 'ಪುಕ್ಕಲು ಬಡ್ಡೀ ಮಗ' ಅಂತ ನನ್ನನ್ನು ಆಡ್ಕೊತಾರೆ' ಎಂದೆ.

'ಹೋಗ್ಲಿ ಬಿಡಿ ಟೇಬಲ್ಲಿನ ಮೇಲೆ ಒಂದು ಬ್ಯಾಗು ರೆಡಿ ಮಾಡಿಟ್ಟಿದ್ದೀನಿ. ಅದರಲ್ಲಿ ಒಂದು ಬರ್ಮುಡಾ ಚಡ್ಡಿ, ಬಿಳೀಪಂಚೆ, ಹಸಿರು ಟವಲು, ಕೈ ತೊಳೆದು ಕೊಳ್ಳುವ ಸೋಪು, ಜತೆಗೆ ಆರು ಮಾರು ಸೆಣಬಿನ ಹಗ್ಗ ಇಟ್ಟಿದ್ದೀನಿ. ಬೆಳಿಗ್ಗೆ ಕೊಂಚ ಹೊತ್ತಿಗೆ ಮುಂಚೆ ಹೊರಡಿ, ದೂರದ ಯಾವುದಾದ್ರು ದೊಡ್ಡ ಮರದ ಕೆಳಗೆ ಕಾರನ್ನು ಪಾರ್ಕು ಮಾಡಿ, ನೀವು ಹಾಕಿರುವ ಧಿರಿಸನ್ನು ಬಿಚ್ಚಿ, ಕಾರಿನಲ್ಲಿಟ್ಟು ಮರೆಯಲ್ಲಿ ನಿಂತು, ನೀಟಾಗಿ ಬರ್ಮುಡ ಚೆಡ್ಡಿಯ ಮೇಲೆ ಪಂಚೆ ಉಟ್ಕೊಳ್ಳಿ. ಹಳ್ಳಿಯ ರಸ್ತೇಲಿ ಜಾರದೆ ನಿಧಾನವಾಗಿ ನಡೆಯುವ ಪ್ರಾಕ್ಟೀಸು ಮಾಡ್ಕೊಳ್ಳಿ'.

'ಇಲ್ಲಾ ಪದ್ದಿ, ಈ ಕಾರ್ಯಕ್ರಮಕ್ಕೋಸ್ಕರ ಹಳ್ಳಿಯ ಅಸ್ತವ್ಯಸ್ತ ರಸ್ತೆಯನ್ನು ರಾಮಾಪುರದ ಆರ್ಚ್ ಗೇಟಿನಿಂದ ತಿಮ್ಮಮ್ಮನವರ ಗದ್ದೆಯವರೆಗೆ ನೀಟಾಗಿ ಡಾಂಬರು ಮಾಡಿದ್ದಾರಂತೆ. ಅಷ್ಟರ ಮಟ್ಟಿಗೆ ನಾನು ಸೇಫು, ಅಂದ್ಹಾಗೆ, ಆರು ಮಾರು ಸೆಣಬಿನ ಹಗ್ಗ ಯಾಕೆ?'

'ಮುಂಜಾಗ್ರತಾ ಕ್ರಮಕ್ಕೇರಿ, ಹ್ಯಾಗಿದ್ರೂ, ನಿಮ್ಮ ಪಿ. ಎ. ನಿಮ್ಮನ್ನು ಅಕಾಂಪನಿ ಮಾಡ್ತಾರೆ. ಈ ಹಗ್ಗಾನ ಅವರು ಸೇಫಾಗಿ ಒಂದು ಸಣ್ಣ ಕ್ಯಾರಿಬ್ಯಾಗಿನಲ್ಲಿ ಇಟ್ಕೊಂಡಿರ್ಲಿ. ನೀವೊ ಅಥವಾ ನಿಮ್ಮ ಕೊಲೀಗ್ಸೊ ಅಕಸ್ಮಾತ್ ಕೆಸರಿನಲ್ಲಿ ಜಾರಿಬಿದ್ದರೆ, ತೆವರಿ ಮೇಲೆ ನಿಂತು ಪಿ. ಎ. ನಿಮ್ಮತ್ತ ಈ ಹಗ್ಗವನ್ನು ಎಸೆಯಲಿ'.

'ಛೇ ಛೆ ಎಂತಹ ದಡ್ಡ ಐಡಿಯಾನೆನಿಂದು. ಇಡೀ ಕಾರ್ಯಕ್ರಮದಲ್ಲಿ ಟಿ. ವಿ. ಮಾಧ್ಯಮದವರೂ, ಅವರ ಕ್ಯಾಮರಾಗಳು ಹದ್ದಿನ ಕಣ್ಣಿಟ್ಟಿರುತ್ತವೆ. ನಾವು ಹೀಗೆಲ್ಲಾ ಎಡವಟ್ಟು ಮಾಡ್ಕೊಂಡ್ರೆ ನಗೆ ಪಾಟಲು ಆಗುಲ್ವೇನೆ?'

'ಛೇ ಬಿಡ್ತು ಅನ್ನಿ. ಎಲ್ಲಾ ಪ್ರಾಬ್ಲಮ್ಸೂ ನಿಮ್ಗೇ ಆಗುತ್ತೆ ಅನ್ನೋ ಭ್ರಮೆ ಯಾಕೆ? ಅಕಸ್ಮಾತ್ ನಿಮ್ಮದೃಷ್ಟಕ್ಕೆ ಮಂತ್ರಿಗಳೇ ಜಾರಿ ಬಿದ್ರು ಅಂತಿಟ್ಕೊಳ್ಳಿ, ನಿಮ್ಗೆ ಅವರ್ನ ಕಾಪಾಡೋ ಛಾನ್ಸ್ ಸಿಗೋಲ್ವೇನ್ರೀ? ಮಂತ್ರಿಗಳ ಕೃಪಾಕಟಾಕ್ಷ ಸಿಕ್ಕಿ ಸಿಟೀ ಕಡೆಗೆ ಟ್ರಾನ್ಸಫರ್ ತಗೋಳಕ್ಕೆ ಹೆಲ್ಪ್ ಆಗುಲ್ವೇನ್ರೀ?' ಎಂದು ಸಮಜಾಯಿಷಿ ಕೊಟ್ಟಳು ಪದ್ದಿ.

'ಯಾಕೊ ನಿದ್ರೆಯೇ ಹತ್ತುತ್ತಿಲ್ಲ ಪದ್ದಿ' ಎಂದೆ. 'ಎರಡು ಆ್ಯಂಕ್ಸಿಟ್ ಮಾತ್ರೆ ನುಂಗಿ ನಿರಾಳವಾಗಿ ನಿದ್ರೆ ಮಾಡಿ' ಎಂದ ಪದ್ದಿ, 'ಯು ನಾಟಿ! ಫೆಲೊ' ಎಂದು ನನ್ನ ಬೆನ್ನು ಸವರಿದಾಗ ಕೊಂಚ ಮಂಪರು ಹತ್ತಿದ ಭಾಸವಾಯಿತು.

ನಿಗದಿಯಂತೆ ಬೆಳಿಗ್ಗೆ ಏಳಕ್ಕೇ ರಾಮಾಪುರ ತಲುಪಿದ ನಾನು ಪದ್ದಿಯ ಡೈರೆಕ್ಷನ್ ಪ್ರಕಾರ ನನ್ನ ನಗರದ ದಿರಿಸನ್ನು ಕಳಚಿ, ರೈತನ ವೇಷ ತೊಟ್ಟು, ತಿಮ್ಮಮ್ಮನವರ ಗದ್ದೆಯ ಬಳಿಗೆ ಬಂದೆ. ಒಂದು ದೊಡ್ಡ ಪೆಂಡಾಲು ಕೆಳಗೆ ಜಮಾಯಿಸಿರುವ ಜನಸ್ತೋಮವನ್ನು ಕಂಡು ಪುಳಕಿತನಾದೆ. ನನ್ನ ಪರ್ಸು, ವಾಚು ಮತ್ತು ಮೊಬೈಲನ್ನ ನನ್ನ ಪಿ.ಎ. ಕೈಗಿತ್ತು, ಹಗ್ಗದ ಉಪಯೋಗದ ಬಗ್ಗೆ ಸವಿವರಣೆ ಕೊಟ್ಟೆ.

ನಾನು ನಾಟಿಕೋತ್ಸವದಲ್ಲಿ ಪೈರನ್ನು ನೆಡುವಾಗ ತಪ್ಪದೆ ದೃಶ್ಯವನ್ನು ಮೊಬೈಲಿನಲ್ಲಿ ಚಿತ್ರೀಕರಿಸಬೇಕೆಂದು ಆಜ್ಞಾಪಿಸಿ ಉಪಾಹಾರದ ಸ್ಟಾಲಿನ ಕಡೆಗೆ ದೌಡಾಯಿಸಿದೆ. ಉಪ್ಪಿಟ್ಟು, ಕೇಸರೀಭಾತು, ಚಹಾ ಸ್ವೀಕರಿಸಿದ ಮೇಲೆ ಕೆಟ್ಟ ಧೈರ್ಯ ನನ್ನನ್ನು ಆವರಿಸಿಕೊಂಡಿತು. ಕೇಸರೀಭಾತಿನ ಬದ್ಲು ಬೇರೇನಾದ್ರೂ ಸಿಹಿ ಮಾಡಬೇಕಿತ್ತು. 'ಕೇಸರಿ' ಎಂದರೆ ಮಂತ್ರಿಗಳು ಎಗರಿಬೀಳುತ್ತಾರೆ, ಎಂದ್ಯಾರೊ ಲೀಡರೊಬ್ಬರು ಸಂಚಾಲಕರ ಮೇಲೆ ತಿರುಗಿ ಬೀಳುತ್ತಿದ್ದ. ಸಮಯಕ್ಕೆ ತಾಳೆಯಾಗಿ ಮಂತ್ರಿಗಳು, ಅವರ ಅನುಯಾಯಿಗಳು, ಮಠಾಧಿಪತಿಗಳು, ಸರ್ಕಾರಿ ವಿವಿಧ ಇಲಾಖಾ ಮುಖ್ಯಸ್ಥರು, ಸರ್ಕಾರಿ ವೈದ್ಯರು, ನಾಟೀ ವೈದ್ಯರೂ....ಮುಂತಾದವರು ಸ್ಥಳಕ್ಕೆ ಬಂದು ಉಪಾಹಾರ, ಉಭಯ ಕುಶಲೋಪರಿ ನಂತರ, ಎಲ್ಲರೂ ಕೆಸರಿನಗದ್ದೆಗಿಳಿದಾಗ ಒಂಥರಾ ಹುಚ್ಚು ಹುಮ್ಮಸ್ಸು ನನಗೆ. ಈ ಹುಮ್ಮಸ್ಸಿನಲ್ಲೇ ಟಿ.ವಿ. ಮೀಡಿಯಾದವರೂ ಕೆಸರು ಗದ್ದೆಗಿಳಿದು ಮಂತ್ರಿಗಳ ಸಂದರ್ಶನ ನಡೆಸಿದರು. ಮಂತ್ರಿಗಳು ನಾಟಿ ಕೆಲಸ ನಿಲ್ಲಿಸಿ, ಉಳಿದವರಿಗೆ ಮುಂದುವರೆಸಲು ಹೇಳಿ ಭಾಷಣಕ್ಕೆ ನಿಂತರು.

'ಇಷ್ಟು ದಿವಸ 'ಕೈ'ಯನ್ನು ನಂಬಿ ಕುಳಿತಿದ್ದೆವೆಂದೂ, ಆದರೆ 'ಕೈ' ಕೆಸರು ಮಾಡಿಕೊಂಡ ಮೇಲೆ ತಮಗೆ ಆತ್ಮಸ್ಥೈರ್ಯ ಹೆಚ್ಚಾಯ್ತೆಂದೂ, ಇನ್ನು ಮುಂದೆ ಅಳುತ್ತಾ ಕೂಡದೆ ರೈತರ ಸಂಕಷ್ಟಕ್ಕೇ ತಮ್ಮ ಸಮಯವನ್ನು ಮುಡಿಪಾಗಿಟ್ಟಿರುತ್ತೇವೆಂದು' ಘೋಷಣೆ ಮಾಡಿದಾಗ ಅಲ್ಲಿ ದೀರ್ಘ ಕರತಾಡನವಾಗಿತ್ತು. ಕಾರ್ಯಕ್ರಮ ಯಶಸ್ವಿಯಾಗಿ ಮುಗಿದು, ಯಾವುದೇ

ಅನಾಹುತವಾಗದೆ ನಾವೆಲ್ಲಾ ಕೈಕಾಲು ತೊಳೆದುಕೊಂಡಾಗ ಪುಷ್ಕಳ ಭೋಜನ ನಮಗಾಗಿ ಕಾದಿತ್ತು.

ಭೋಜನದ ವೇಳೆ ನನ್ನ ಪಿ. ಎ. ಸರ್, ತಾವು ಕೈಯಲ್ಲಿ ಪೈರು ಹಿಡಿದು ನಾಟಿ ಮಾಡುತ್ತಿರುವ ಚಿತ್ರ ಸೊಗಸಾಗಿ ಮೊಬೈಲಿನಲ್ಲಿ ಚಿತ್ರಿತವಾಗಿದೆಯೆಂದೂ ನನ್ನದು ಗದ್ದೆ ಕೆಲಸಕ್ಕೆ ಹೇಳಿ ಮಾಡಿಸದ ಕೈಯೆಂದು, ರಿಟೈರ್ಡ್ ಆದ ಮೇಲೆ ಒಂದೆರಡು ಎಕರೆ ಜಮೀನು ಖರೀದಿಸಿ ಹಾಯಾಗಿ ಜೀವನ ನಿರ್ವಹಿಸಬಹುದೆಂದು ಸಲಹೆ ಕೊಟ್ಟಾಗ ಉಬ್ಬಿಹೋದೆ.

ಮೇಲಿನ ಈ ಕಹಾನಿಯನ್ನು ನಮ್ಮ ಕಾಮನ್ ರೂಮಿನ ಸಭೆಯಲ್ಲಿ ಇಂದು ಹೇಳಬೇಕಾದ ಅನಿವಾರ್ಯ ಪ್ರಸಂಗ ನನಗೊದಗಿ ಬಂದಿತ್ತು. ಯಾಕೆಂದರೆ ರಾಯರಿಗೆ ನೀರಿನ ವ್ಯತ್ಯಾಸವಾಗಿ ಗಂಟಲು ತೀರಾ ಕಟ್ಟಿ ಮಾತನಾಡಲಾಗದ ದುಃಸ್ಥಿತಿ ಬಂದಿತ್ತು.

'ಸರ್, ಸಭೆ ಬರಖಾಸ್ತು ಮಾಡುವ ಮುನ್ನ ನನ್ನ ಪಿ. ಎ. ತೆಗೆದಿರುವ ಈ ವ್ಯಾಟ್ಸಾಪ್ ಚಿತ್ರಗಳನ್ನು ನೋಡಿ' ಎಂದು ಹೆಮ್ಮೆ ಹಾಗೂ ಗೌರವದಿಂದ ನನ್ನ ಸ್ಮಾರ್ಟ್ ಫೋನನ್ನು ರಾಯರ ಕೈಗಿತ್ತೆ. ಚಿತ್ರಗಳನ್ನು ಸ್ಕ್ರಾಲ್ ಮಾಡಿ ನೋಡಿದ ರಾಯರ ಮುಖ ಕಂಪಿಟ್ಟಿತು.

'ಯು ಸ್ಟುಪಿಡ್ ನಾಟಿ! ಫೆಲೊ' ಎಂದು ಗೊಗ್ಗರ ದನಿಯಲ್ಲಿ ರೇಗಿಕೊಂಡರು ರಾಯರು.

'ಯಾಕ್ಸಾರ್? ಎಂದೆ ಭಯದಿಂದ'.

'ಏನಯ್ಯಾ ಭತ್ತದ ಪೈರನ್ನು ತಳಕಾ ಪಳಕಾ ಹಿಡಿದು ನಾಟಿ ಮಾಡಿದ್ದೀಯಲ್ಲ, ಕೊಂಚವೂ ಕಾಮನ್ಸೆನ್ಸು ಬ್ಯಾಡವೆ?'

ರಾಯರ ಮಾತು ಕೇಳಿ ನನ್ನ ಜಂಘಾಬಲವೇ ಉಡುಗಿದಂತಾಯ್ತು. ನಾನೇನಾದ್ರೂ ಮಂತ್ರಿಗಳನ್ನು ಅನುಕರಿಸಿದೆನೆ? ಎಂಬ ಸಂಶಯ ಬಲವಾಗಿಯೂ ನನ್ನನ್ನು ಕಾಡಿತ್ತು.

'ಎಲ್ಲಾ ಚಿತ್ರಗಳನ್ನೂ ಡಿಲೀಟು ಮಾಡಯ್ಯಾ' ಎಂದು ಆಜ್ಞಾಪಿಸಿದರು ರಾಯರು.

'ಸರ್ ಒಂದು ಅಚಾತುರ್ಯವಾಗಿ ಹೋಗಿದೆ. ಹಾಳು ಪಿ. ಎ. ಈ ವ್ಯಾಟ್ಸಪ್ಪಿನ ಚಿತ್ರಗಳನ್ನು ಕಛೇರಿಯ ನನ್ನ ಬಾಸ್‌ಗೆ ಈಗಾಗಲೇ ರವಾನಿಸಿಬಿಟ್ಟಿದ್ದಾನೆ' ಎಂದೆ. ರಾಯರು ಕೆಟ್ಟ ಮೌನಕ್ಕೆ ಜಾರಿದರು!

ಉಲ್ಟಾ ಪೈರು ಹಿಡಿದು ನಾಟಿ ಮಾಡಿ ಬಂದಿದ್ದ ನನ್ನ ಕಣ್ಣ ಮುಂದೆ, ನನ್ನ ಕೋಪಿಷ್ಠ ಬಾಸ್ ಫ್ಯೂನರಲ್ ಪೈರನ್ನು! ಹಿಡಿದು ನಿಂತಿರುವ ದೃಶ್ಯ ಕಲ್ಪಿತವಾಗಿ ರಾಯರ ಮುಂದೆ ಕುಸಿದು ಕುಳಿತೆ.

# ಬಹುಮಹಡಿ ಅಗ್ರಹಾರವು

**– ಶಂಸ**

704 ನೆಯ ತಾತ ಸತ್ತು ಹೋದರಂತೆ' ಎಂದು 803ನೆಯ ಹುಡುಗ ತಿಳಿಸಿದಾಗ 'ಯಾವಾಗ' ಎಂದು ಕೇಳಿದೆ. 'ಗೊತ್ತಿಲ್ಲ, 604ನೆಯ ಆಂಟಿ ನಿಮಗೆ ತಿಳಿಸಲು ಹೇಳಿದ್ದಾರೆ' ಎನ್ನುತ್ತ ಅವನು ಕಾಣದಂತೆ ಮಾಯವಾಗಿಬಿಟ್ಟ. ಯಾರು ಈ 704? ನೆನಪಿಗೆ ಬರಲಿಲ್ಲ. ಆದರೆ ಅದೃಷ್ಟವಶಾತ್ 703ರ ನೆನಪಾಯಿತು. 703, ಹೌದು, 703. ಆಗಾಗ ಲಿಫ್ಟ್‌ನಲ್ಲಿ ಸಿಕ್ಕಿ 'ಮೈಸೂರ್ ಅಂಕಲ್, ಚೆನ್ನಾಗಿದ್ದೀರಾ? ಎಂದು ವಿಚಾರಿಸುತ್ತಾರಲ್ಲ? ಅವರೇ, ಅದೇ ದಪ್ಪ ಹೆಂಗಸು, ಅವರ ಪತಿರಾಯರೂ ನನಗೆ ಅಲ್ಪಸ್ವಲ್ಪ ಪರಿಚಿತರೇ. ಅವರೇ ಆಗಾಗ ಹೇಳುತ್ತಾರಲ್ಲ 'ನಾನು ಮತ್ತು 704 – ಇಬ್ಬರೂ ಈ ಅಪಾರ್ಟ್‌ಮೆಂಟಿನ ಮೂಲನಿವಾಸಿಗಳು' ಎಂದು. ಅನಂತರ ಎರಡು–ಮೂರು ವರ್ಷಗಳೇ ಬೇಕಾಯಿತಂತೆ– ಇದು ತುಂಬಿ ತುಳುಕಲು. ಈಗ ಜ್ಞಾಪಕಕ್ಕೆ ಬಂತು 704 ಎಂದರೆ, ಪ್ರತಿದಿನ ಸಂಜೆ ತಮ್ಮ ಮೊಮ್ಮಗುವಿನೊಂದಿಗೆ ಬೇಸ್‌ಮೆಂಟಿಗೆ ಬಂದು, ಸೆಕ್ಯುರಿಟಿಯ ಆಸನವನ್ನು ಆಕ್ರಮಿಸಿ ಕುಳಿತುಕೊಳ್ಳುತ್ತಿದ್ದರಲ್ಲ, ಅವರೇ. ಆ ಮೊಮ್ಮಗುವಿಗೂ ನನ್ನನ್ನು ಕಂಡರೆ ಖುಷಿ. ನನ್ನನ್ನು ನೋಡಿದೊಡನೆ 'ಹೈ ಫೈ' ಸನ್ನೆ ಮಾಡಿ ಮುಗುಳ್ನಗುತ್ತಿತ್ತು. ಅದರ ಹೆಸರೂ ಖುಷಿಯಂತೆ. ಅದನ್ನು ನೋಡಿ ನನಗೂ 'ಭಯಂಕರ' ಖುಷಿಯಾಗುತ್ತಿತ್ತು.

> ಬಹುಮಹಡಿ
> ಅಪಾರ್ಟ್‌ಮೆಂಟ್
> ಅಗ್ರಹಾರಕ್ಕಿಂತ
> ವಿಭಿನ್ನ ಏಕೆ?

ಏನೇ ಇರಲಿ, ಐದೂಕಾಲಡಿ 'ಕುಬ್ಜನಾದ' ನಾನು ಅರಮನೆ ನಗರಿ ಮೈಸೂರಿನಿಂದ ಬೆಂಗಳೂರು ಸೇರಿ ಈಗ ಎತ್ತರದ ವ್ಯಕ್ತಿಯಾಗಿದ್ದೇನೆ ಹೌದು ನನ್ನ ಮನೆಯಿರುವುದೇ ಅಪಾರ್ಟ್‌ಮೆಂಟಿನ ನಾಲ್ಕನೆಯ ಮಹಡಿಯಲ್ಲಿ ಫ್ಲಾಟ್ ನಂಬರ್ 420. (ಅದನ್ನು ನಾನು, ರೆಸಿಡೆಂಟ್ಸ್ ಅಸೋಸಿಯೇಷನ್ನಿಗೆ ಅರ್ಜಿಸಲ್ಲಿಸಿ, ಸ್ವ–ಇಚ್ಛೆಯಿಂದ 419ಎ ಎಂದು ಬದಲಾಯಿಸಿಕೊಂಡಿದ್ದೇನೆ. ಚಿಕ್ಕಪುಟ್ಟ ಮಕ್ಕಳೆಲ್ಲ ನನ್ನನ್ನು ಪ್ರೀತಿಯಿಂದ ಫೋರ್‌ಟ್ವೆಂಟಿ ತಾತ' ಎಂದು ಕರೆಯತೊಡಗಿದುದರಿಂದ)

ಏಕೋ ಏನೋ. ಈ ಸಂದರ್ಭದಲ್ಲಿ ನಾನು ಮಧುರ ಬಾಲ್ಯವನ್ನು ಕಳೆದ ನಮ್ಮ ಹಳೆಯ ಅಗ್ರಹಾರದ ನೆನಪು ಉಂಟಾಗುತ್ತದೆ. (ಎತ್ತಣಮಾಮರ, ಎತ್ತಣಕೋಗಿಲೆ? ಎತ್ತಣ ಅಗ್ರಹಾರ, ಎತ್ತಣ ಅಪಾರ್ಟ್‌ಮೆಂಟು?) ಹತ್ತೂ–ಹದಿನೈದು ಮನೆಗಳಿದ್ದ ಆ ಪುಟ್ಟ ಅಗ್ರಹಾರದಲ್ಲಿ ಎಲ್ಲರೂ ಅಪ್ಪಟ ಬ್ರಾಹ್ಮಣರೇ. ಮನೆಯ ಒಡೆಯರ ಸರ್ನೇಮುಗಳೇ ಎಷ್ಟು ಚಂದವಾಗಿದ್ದವು? (ಅಡಿಗ, ಉಡುಪ, ಐತಾಳ, ಬಾಯಿರಿ, ತಂತ್ರಿ, ಹಂದೆ, ಹೊಳ್ಳ, ಹೆಬ್ಬಾರ..ಇತ್ಯಾದಿ ಪರಿಮಳದ ಪುಷ್ಪಗಳಂತಹ ಹೆಸರುಗಳು) ಆದುದರಿಂದ ನನಗೆ ತಿವಾರಿ, ಗುಪ್ತ, ಸಿಂಗ್, ವರ್ಮ, ಸರ್ಕಾರ್ ಮುಂತಾದ ಹೆಸರುಗಳು ಕಿವಿಗೆ ಅಷ್ಟು ಹಿತವೆನಿಸುವುದಿಲ್ಲ.

ಅಗ್ರಹಾರದಲ್ಲಿ ಎಲ್ಲ ಕುಟುಂಬಗಳಿಗೂ ಇತರ ಕುಟುಂಬದ ಸದಸ್ಯರ ಗಾಢ ಪರಿಚಯವಿರುತ್ತಿತ್ತು. ಯಾರು ಯಾರಿಗೆ ಎಷ್ಟೆಷ್ಟು ಮಕ್ಕಳು? ಅವುಗಳಲ್ಲಿ ಎಷ್ಟು

ಗಂಡು? ಎಷ್ಟು ಹೆಣ್ಣು? ಅವುಗಳಿಗೆ ಮದುವೆಯಾಗಿದೆಯೇ, ಇಲ್ಲವೇ? ಆಗಿದ್ದರೆ ಸರಿ, ಆಗದೆ ಇದ್ದರೆ ಏಕೆ ಆಗಿಲ್ಲ? ಮದುವೆಯಾಗಿದ್ದರೆ ಮಕ್ಕಳಾಗಿವೆಯೇ? ಹೆಣ್ಣುಗಳನ್ನು ಯಾವ ಯಾವ ಊರಿಗೇ(?) ಕೊಟ್ಟಿದ್ದಾರೆ? ಅವುಗಳ ಗಂಡಂದಿರು ಯಾವ ಯಾವ ಉದ್ಯೋಗಗಳಲ್ಲಿದ್ದಾರೆ? ಮನೆಯ ಯಜಮಾನರು ಕೃಷಿಕರೇ, ಮೇಸ್ಟರೇ, ಪುರೋಹಿತರೇ, ಅಡಿಗೆ ಭಟ್ಟರೇ? ಎಲ್ಲ ವಿವರಗಳು ಎಲ್ಲರಿಗೂ ತಿಳಿದಿರುತ್ತಿದ್ದವು, ಯಾವ ಕುಟುಂಬಕ್ಕೂ ಯಾವುದೇ ಗುಟ್ಟನ್ನು ಮುಚ್ಚಿಡಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ಗುಟ್ಟನ್ನು ಮುಚ್ಚಿಟ್ಟುಕೊಳ್ಳಲು ಯಾವ ಕುಟುಂಬಗಳೂ ಬಯಸುತ್ತಿರಲಿಲ್ಲ. ಎಲ್ಲರದೂ ಕನ್ನಡಿಯಂತಹ ತೆರೆದ ಮನಸ್ಸು.

ಆದರೆ ಈ ಅಪಾರ್ಟ್‌ಮೆಂಟಿನ ಪ್ರತಿಯೊಂದು ಕುಟುಂಬದ್ದೂ ತನ್ನದೇ ಆದ ಪ್ರತ್ಯೇಕ ಜಗತ್ತು. ಯಾವುದೇ ಕುಟುಂಬದ ವಿವರಗಳು ಬಹುಮಟ್ಟಿಗೆ ಇತರ ಯಾವುದೇ ಕುಟುಂಬಗಳಿಗೆ ತಿಳಿಯುವುದಿಲ್ಲ. 'ಬಹುಮಟ್ಟಿಗೆ ಎಂದು ಏಕೆ ಹೇಳುತ್ತಿದ್ದೇನೆಂದರೆ, ಮನೆ ಕೆಲಸಕ್ಕೆ ಬರುವ ವಾಚಾಳಿ ಕೆಲಸಗಾರ್ತಿಯರಿರುತ್ತಾರಲ್ಲ! ಇವರಿಂದ ಆಗಾಗ ಕೆಲವು ಕುಟುಂಬಗಳ ಗುಟ್ಟುಗಳು ರಟ್ಟಾಗುವುದುಂಟು. ಈ ಜೀವಂತ ವಾರ್ತಾಪತ್ರಿಕೆಗಳು ತಾವು ಪತ್ತೆಮಾಡಿದ ಮನೆವಾರ್ತೆ (ಸುದ್ದಿ)ಗಳನ್ನು ಅಪಾರ್ಟ್‌ಮೆಂಟ್ ಇಡೀ ಪ್ರಸಾರಮಾಡುವುದುಂಟು. ಒಂದೊಂದು ಮನೆಯೂ ಒಂದೊಂದು ದ್ವೀಪದಂತೆ ಇರುವುದರಿಂದ ಎಲ್ಲರೂ ಒಟ್ಟಿಗೆ ಸೇರುವ ಸಂದರ್ಭ ಬರುವುದು ವರ್ಷದಲ್ಲಿ ಕೆಲವೇ ಸಲ, ಅಸೋಸಿಯೇಷನ್ನಿನ ಜನರಲ್ ಮೀಟಿಂಗ್, ಮೊಹರಮ್, ಕ್ರಿಸ್‌ಮಸ್, ಲೇಡೀಸ್ ಕ್ಲಬ್ಬಿನ ವಾರ್ಷಿಕೋತ್ಸವ, ಗಣೇಶ ಚೌತಿ, ದೀಪಾವಳಿ, ನ್ಯೂಯಿಯರ್ಸ್ ಡೇ– ಇವೇ ಮುಂತಾದ ದಿನಗಳಲ್ಲಿ. ಆಗಲೂ ಎಲ್ಲ ಗಡಿಬಿಡಿಯಲ್ಲಿಯೇ ಇರುವುದರಿಂದ, ಅನವಶ್ಯಕ ಧಾವಂತದಲ್ಲಿ ಪುಕ್ಕುಳಿಸುಟ್ಟ ಬೆಕ್ಕುಗಳಂತೆ ಅತ್ತಿತ್ತ ಓಡಾಡುತ್ತ ಇರುವುದರಿಂದ, ಪರಸ್ಪರ ಮುಖಗಳನ್ನು ಕಾಣುವ ಸುವರ್ಣಾವಕಾಶ ಬಹಳ ಅಪರೂಪ. ಅಗ್ರಹಾರಗಳಲ್ಲಿ ಹರಟೆ ಹೊಡೆಯಲು ಸಿಗುವ ಅವಕಾಶ ಇಲ್ಲಿಯಾರಿಗೂ ಸಿಗುವುದಿಲ್ಲ, ಹೆಂಗಸರಿಗೂ ಸಿಗುವುದಿಲ್ಲ, ಅಜ್ಜ ಅಜ್ಜಿಯರಿಗೂ ಸಿಗುವುದಿಲ್ಲ. ಆಫೀಷಿಯಲ್ ಆಗಿ ಮಾತನಾಡಬೇಕಾದ ಸಂದರ್ಭದಲ್ಲಿ ಕೂಡ, ಸಲೀಸಾಗಿ ಮಾತನಾಡಲು ಸಾಧ್ಯವಾಗದಂತಹ ವಿಷಮ ಪರಿಸ್ಥಿತಿ. ಏಕೆಂದರೆ ಕೆಲವೇಕೆಲವು ಕನ್ನಡಿಗರನ್ನು ಬಿಟ್ಟರೆ ಉಳಿದವರ ಭಾಷೆ ತಮಿಳು, ತೆಲುಗು, ಮಲೆಯಾಳಿ ಇತ್ಯಾದಿ.

ಅಗ್ರಹಾರದ ಸುತ್ತಮುತ್ತ ಹೂದೋಟಗಳಿರುತ್ತಿದ್ದವು. ಎಷ್ಟು ಬಗೆಯ ಹೂಗಳು ಗೋರಟೆ, ಮಂದಾರ, ಮಲ್ಲಿಗೆ, ಪಾರಿಜಾತ, ನಂದಿಬಟ್ಟಲು, ದಾಸವಾಳ ಕನಕಾಂಬರ ಕಿತ್ತುಕಿತ್ತು ಹಾರಮಾಡಿ ದೇವರಿಗೆ ಏರಿಸಬಹುದಾಗಿತ್ತು. ಹೆಂಗಸರಿಗೆ ಮುಡಿಗೆ ಏರಿಸಿಕೊಳ್ಳಲು ಸಾಧ್ಯವಾಗುತ್ತಿತ್ತು ಆದರೆ ಅಪಾರ್ಟ್‌ಮೆಂಟಿನಲ್ಲಿ? ವರ್ತನೆ ಹೂವಾಡಗಿತ್ತಿಯರೇನೋ ಪ್ರತಿದಿನ ಬೆಳಿಗ್ಗೆ ಹೂ ತಂದುಕೊಡುತ್ತಾರೆ. ಆದರೆ ಅವರು ತಂದುಕೊಡುವ ಹೂಗಳಲ್ಲಿ ವೈವಿಧ್ಯವಿರುವುದಿಲ್ಲ, ಬರಿಯ ಸೇವಂತಿಗೆ ಅಥವಾ ಗುಲಾಬಿ.

ಇಲ್ಲಿಯೇ ಒಂದು ಮಾತು. ಮನೆಗೆ ಹೂ, ಹಾಲು, ಪತ್ರಿಕೆಗಳನ್ನು ತಂದು ಕೊಡುವವರದ್ದೆಲ್ಲ ತಮ್ಮ ತಮ್ಮದೇ ಆದ ಮಾನೋಪಲಿ. 'ಹಾಲು ತಂದು ಕೊಡುವುದು

ಏಕೆ ತಡವಾಯಿತು?' 'ನಿನ್ನೆ ವಿಶ್ವವಾಣಿಯ ಬದಲು ಪ್ರಜಾವಾಣಿಯನ್ನು ತಂದು ಹಾಕಿದ್ದು ಏಕೆ? ನಿನ್ನೆ ನೀನು ತಂದು ಹಾಕಿದ್ದು ಮೊನ್ನೆಯ ಹಳೆಯ ಹೂವು ಎಂದು ಜಗಳವಾಡುವಂತಿಲ್ಲ, ಅವರು ಹೇಗೆಯೇ ವರ್ತಿಸಲಿ, ಏನೇ ಧಿಮಾಕುತೋರಿಸಲಿ, ನಾವು ಗಪ್‌ಚಿಪ್ ಅನ್ನಕೂಡದು. ಅವರಿಗೆ ಅಡ್ಜಸ್ಟ್ ಆಗಲೇಬೇಕು. ಇಲ್ಲವಾದರೆ ತೊಂದರೆಗೆ ಒಳಗಾಗುವುದು ನಾವೇನೇ. ಹೌದು, ಖುದ್ದು ನಾವೇನೇ.

ಅಗ್ರಹಾರದಲ್ಲಿ ಸುತ್ತಮುತ್ತ, ಬೆಳಿಗ್ಗೆ ಮತ್ತು ಸಾಯಂಕಾಲ ಗಾಳಿಸಂಚಾರ ಮಾಡಲು ವಿಶಾಲವಾದ ಜಾಗಗಳಿರುತ್ತಿದ್ದವು ಆದರೆ ಇಲ್ಲಿ? ಈ ಕಾಡಿನಲ್ಲಿ? ಬೆಳಿಗ್ಗೆ ಗಂಡಸರು, ಬೇಸ್‌ಮೆಂಟಿನಲ್ಲಿ ಪಾರ್ಕಿಂಗ್ ಮಾಡಿರುವ ಕಾರು, ಸ್ಕೂಟರ್‌ಗಳ ನಡುವೆಯೇ ಅಷ್ಟಿಷ್ಟು ಸ್ಪೇಸ್ ಹುಡುಕಿಕೊಂಡು ಆ ವಾಹನಗಳಿಗೆ ಢಿಕ್ಕಿಹೊಡೆಯದೆ, ವಕ್ರವಕ್ರವಾಗಿ ಅಡ್ಡಾಡಬೇಕು. ಸಂಜೆ ಹೆಂಗಸರು ನೈಟಿ ಚೂಡಿದಾರ ಮುಂತಾದ ಬಗೆಬಗೆಯ ದಿರಿಸುಗಳನ್ನು ಧರಿಸಿ ಟೆರೇಸ್‌ನಲ್ಲಿ ಕ್ಯಾಟ್‌ವಾಕ್ ಮಾಡಬೇಕು.

ಅಗ್ರಹಾರದ ಮನೆಗಳಲ್ಲಿ ಕೂಡ ಎಷ್ಟೊಂದು ವೈವಿಧ್ಯ. ವಿಶಾಲವಾದ ಪಡಸಾಲೆ, ಅಗಲವಾದ ಚಾವಡಿ ಕಿರಿದಗಲವಾದ ಜಗಲಿ, ಯಾವಾಗಲೂ ಸೌತೆಕಾಯಿ, ಈರುಳ್ಳಿ ಮತ್ತಿತರ ತರಕಾರಿಗಳಿಂದ, ಹಣ್ಣುಹಂಪಲುಗಳಿಂದ ತುಂಬಿತುಳುಕುವ ಉಗ್ರಾಣ, ಐದಾರು ಜನಕ್ಕೆ ಬಾಳ್ಯಹಾಕಿ ಬಡಿಸಬಹುದಾದಷ್ಟು ದೊಡ್ಡ ಅಡುಗೆಮನೆ, ಆ ಅಡುಗೆ ಮನೆಯೊಳಗೆ ಅಡಗಿರುವ ದೇವರ ಮನೆ (ದೇವರ ಗೂಡು), ಅದಕ್ಕೆ ಮಡಲಿನ ಚಪ್ಪರ, ಗೋಡೆಗಳಿಂದ, ಕಟ್ಟಿದ, ತೊಂಡೆ ಬಳ್ಳಿಗಳು ಹಬ್ಬಿರುವ ಓಪನ್ ಬಾತ್ ರೂಮ್, ಮದುವೆ ಮುಂಜಿಗಳೂ, ಪವಮಾನ ಹೋಮ, ಸತ್ಯನಾರಾಯಣ ವ್ರತ ಮುಂತಾದ ಸಮಾರಂಭಗಳನ್ನು ನಡೆಸಬಹುದಾದಂತಹ ಭಾರೀ ದೊಡ್ಡ ಅಂಗಳ. ಎಲ್ಲ ಮಾಮೂಲಿ. ಆದರೆ ಅಪಾರ್ಟ್‌ಮೆಂಟ್‌ಗಳಲ್ಲಿ ಇರುವುದೆಲ್ಲ ಒಂದೇ ವಿನ್ಯಾಸದ ಎರಡು ಅಥವಾ ಮೂರು ಬಿ.ಎಚ್.ಕೆ ಫ್ಲಾಟುಗಳು. (ಆಗಲೇ ಹೇಳಿದಂತಹ ಬೆಂಕಿಪೆಟ್ಟಿಗೆಗಳು) ಜನರು ಗಾಳಿ ಬೆಳಕೂ ಸುತ್ತಾಡದಂತಹ (ಸೆರೆ) ಮನೆಯೊಳಗೆ ದಿನದ ಇಪ್ಪತ್ತನಾಲ್ಕು ಗಂಟೆಯ ಕಾಲ ಕಳೆಯಬೇಕು, ಕೊಳೆಯಬೇಕು ಮನೆಯ ಮುಂಬಾಗಿಲಿನ ಹೊರಗೆ ಕಾಲಿಟ್ಟರೆ ನಾವು ಇರುವುದು ಸಾರ್ವಜನಿಕ (ಕಾಮನ್) ಸ್ಥಳದಲ್ಲಿ ಅಗ್ರಹಾರದಲ್ಲಿ ಪುಕ್ಕಟೆ ಲಭ್ಯವಾಗುವ ಗಾಳಿ, ಸೂರ್ಯನ ಸಹಜ ಬೆಳಕು, ರಾತ್ರಿಯ ಬೆಳದಿಂಗಳು, ಮರಗಿಡಬಳ್ಳಿ, ಹಸಿರು ಪರಿಸರಗಳು ಇಲ್ಲಿ ಎಲ್ಲಿ?

ಊರಿನ ವಾರದ ಸಂತೆಯ ಸಂಭ್ರಮ ಸಡಗರಗಳಿಗೆ, ಇಲ್ಲಿಯ ವೀಕ್ ಎಂಡ್‌ಗಳ ಮಾಲ್‌ಗಳ ಷಾಪಿಂಗಿನ ಮಜಾ-ಮೋಜು ಎಂದಾದರೂ ಸರಿಸಾಟಿಯಾದೀತೇ? ಊಹು, ಊಹು;

ಅತ್ತೆ ಬಾವಯ್ಯ, ಮಾವಯ್ಯ ಚಿಕ್ಕಪ್ಪ/ಮ್ಮ, ದೊಡ್ಡಮ್ಮ/ಪ್ಪ, ನಾದಿನಿ, ಬಾವ ಮೈದುನ, ಸೊಸೆ, ಅಳಿಯ - ಈ ಕೌಟುಂಬಿಕ ಸಂಬಂಧಗಳೆಲ್ಲ ಕಂಡುಬರುವುದು, ಉಳಿದಿರುವುದು ಊರುಗಳಲ್ಲಿ ಮಾತ್ರ. ಈ ಅಪಾರ್ಟ್‌ಮೆಂಟ್‌ಗಳಲ್ಲಿ ಅಪ್ಪ ಅಮ್ಮ ತಮ್ಮತಂಗಿ ಅಕ್ಕ ಅಣ್ಣಂದಿರನ್ನು ಬಿಟ್ಟರೆ ಉಳಿದವರೆಲ್ಲ ಅಂಕಲಾಂಟಿಯರೇ. ಅಪ್ಪ-ಅಮ್ಮಂದಿರೂ ಅಪ್ಪ-ಅಮ್ಮಂದಿರಲ್ಲ, ಡ್ಯಾಡಿ-ಮಮ್ಮಿಯರು, ಇಲ್ಲಿ ಚಿಕ್ಕ ಮಕ್ಕಳು ಮಾತ್ರ ನನ್ನಂತಹ ಮುದುಕರನ್ನು ತಾತ ಎಂದು ಕರೆಯುತ್ತಾರೆ. (ದೊಡ್ಡವರ ಪಾಲಿಗೆ,

ಮುದುಕನಾಗಿರುವ ನಾನೂ, ಇಲ್ಲಿ 'ಮೈಸೂರು ಅಂಕಲ್ಲೇ' ಆಗಿದ್ದೇನೆ).

ಊರಿನಲ್ಲಿ ಯಾರೊಂದಿಗೆ ಬೇಕಾದರೂ ಮನಬಿಚ್ಚಿ ಮಾತನಾಡಬಹುದು, ಸುಖದುಃಖ ಹಂಚಿಕೊಳ್ಳಬಹುದು; ಸ್ನೇಹ ವಿಶ್ವಾಸಗಳನ್ನು ಉಳಿಸಿಕೊಳ್ಳಬಹುದು; ನೆಂಟರಿಷ್ಟರ ಸಂಬಂಧಕ್ಕಿಂತ ಹೆಚ್ಚಾಗಿರುವ ಮಾನವ ಸಂಬಂಧವನ್ನು ಬೆಳೆಸಿಕೊಳ್ಳಬಹುದು. ಪರಸ್ಪರನೆರವು ನೀಡಿ ಪಡೆಯಬಹುದು. ಮುಕ್ತ ಮನಸ್ಸಿನಿಂದ ಮಾತುಕತೆ ನಡೆಸಬಹುದು. ಆದರೆ ಅಪಾರ್ಟ್‌ಮೆಂಟ್‌ಗಳಲ್ಲಿ ಇಂತಹ ಯಾವ ಸಂಬಂಧಗಳೂ ಇರುವುದಿಲ್ಲ; ಮಾತುಕತೆಗಳಿಗೂ ಅಸ್ಪದವಿಲ್ಲ. ಅಕಸ್ಮಾತ್ ಆಗಿ ಲಿಫ್ಟಿನಲ್ಲಿಯೋ, ಪಾರ್ಕಿಂಗಿನಲ್ಲಿಯೋ, ಭೇಟಿಯಾದರೂ 'ಆರಾಮ್ ಹೇನಾ? ನಮಸ್ತೇ ಮೇಡಂ 'ಪ್ರಣಾಮ್ ಜೀ' ಅಥವಾ 'ಹೌಡು ಯು ಡೂ?' ಇಷ್ಟು ಮಾತ್ರ.

ನಾನಿರುವ ಫ್ಲೋರಿನಲ್ಲಿರುವ ನಾಲ್ಕು ಮನೆಗಳೂ ಹೆಚ್ಚುಕಮ್ಮಿ ಮಿನಿ ವೃದ್ಧಾಶ್ರಮಗಳೇ, ಇವುಗಳಿಗೆ ಅಲ್ಪಸ್ವಲ್ಪ ಜೀವ ಬರುವುದು, ಜೀವಶಕ್ತಿ ಬಂದು ಉತ್ಸಾಹ ಲವಲವಿಕೆಗಳು ಕಾಣಿಸಿಕೊಳ್ಳುವುದು ವಾರಾಂತ್ಯದ ದಿನಗಳಲ್ಲಿ, ಬೇರೆ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳದೆ, ಡ್ಯಾಡಿ-ಮಮ್ಮಿಗಳನ್ನು ನೋಡಲು ತಮ್ಮತಮ್ಮ ಮಕ್ಕಳೊಂದಿಗೆ ಬರುವ ಉದಾರಶೀಲ ಮಕ್ಕಳು ಮಾತ್ರ. ಉಳಿದ ದಿನಗಳಲ್ಲಿ ಸ್ಮಶಾನ ಮೌನ ಅಥವಾ ದೂರದರ್ಶನಗಳ ಧಾರಾವಾಹಿಗಳ ಆರ್ಭಟ.

ಹೀಗೆ ಎಷ್ಟು ಬರೆದರೂ ಮುಗಿಯದು ಈ ಅಪಾರ್ಟ್‌ಮೆಂಟ್ ಬದುಕಿನ ಕಥೆ ಮತ್ತು ವ್ಯಥೆ ಅಥವಾ ಎಂದೆಂದೂ ಮುಗಿಯದ ಮೆಗಾ ಸೀರಿಯಲ್.




**ಗುಡ್ ಮಾರ್ನಿಂಗ್ ಮೆಸೇಜು ಬಂತು...**
**ಅಂದ್ರೆ ನಿಮ್ಮ ಮಗ ಎದ್ದಿದ್ದಾನೆ ಅಂತ ಅರ್ಥ..!!**

# ಬಾಡಿಗೆ ಮನೆ

– ನಂನಾಗ್ರಾಜ್

ಸೂಕ್ತವಾದ ಬಾಡಿಗೆ ಮನೆ ಹುಡುಕಿ ಹಿಡಿಯುವುದು ಒಂದು ದೊಡ್ಡ ಕಸರತ್ತು. ಅದೊಂದು ಬೇಟೆಯ ತರಹ. ವಿಪರ್ಯಾಸವೆಂದರೆ ಬೇಟೆಗಾರನೇ ಬೇಟೆಯಾಗುವ ಸಾಧ್ಯತೆಗಳೇ ಜಾಸ್ತಿ!

ಬಾಡಿಗೆ ಮನೆಗಳ ಸೈಜ್ ಹಾಗೂ ಅನಾನುಕೂಲಗಳು ಪೂರ್ವಯೋಜಿತ ಅನಿವಾರ್ಯತೆಯಿಂದ ಬಂದ ಬಾಡಿಗೆದಾರರು ಆಗಾಗ ಬದಲಾಗಿ ಮಾಲೀಕರಿಗೆ ಹೆಚ್ಚು ಹೆಚ್ಚು ಬಾಡಿಗೆ ಖಾತರಿ!

> ಬಾಡಿಗೆ ಮನೆ
> ಹಿಡಿಯುವುದೆಂದರೆ
> ಬಾಡಿಗೇ ಪೈನ್

ಇನ್ನು ಬ್ರೋಕರ್ಸ್‌ಗಳೋ ಸರಿಯಾದ ಜೋಕರ್ಸ್. ನಾಲ್ಕೈದು ಜೋಕರ್ಸ್‌ಗಳೊಡನೆ ಪಳಗಿದ ಮೇಲೆ ಅವರು ಬಡಬಡಿಸಿದ್ದರಲ್ಲಿ ಎಷ್ಟು, ಹೇಗೆ ತೆಗೆದುಕೊಳ್ಳಬೇಕೆಂಬ ಅಂದಾಜು ಸಿಕ್ಕಿದೆ.

ಶುರುವಾಗುತ್ತೆ ಮನೆಯ ಬಗ್ಗೆ ಅವರ ಗುಣಗಾನ; 24ಬೈ7 ರನ್ನಿಂಗ್ ವಾಟರ್ ಸಾರ್!

(24ಬೈ7 ರನ್ನಿಂಗ್ (ಫಾರ್) ವಾಟರ್! (ಅಶ್ವತ್ಥಾಮೋ ಹತಃ ಕುಂಜರಃ!)

ಏನು ವೆಂಟಿಲೇಶನ್ನೂ, ಏನು ವೆಂಟಿಲೇಶನ್ನೂ ಸಾರ್, ಗಾಳಿ, ಬೆಳಕು ತುಂಬಾನೆ ಚೆನ್ನಾಗಿ ಬರುತ್ತೆ.

(ಎರಡು ಕಿಟಕಿಗಳು ಮುರಿದಿದ್ದು, ಬಾಗಿಲು ಬಿರುಕು ಬಿಟ್ಟಿದೆ, ಗಾಳಿ, ಬೆಳಕು ಚೆನ್ನಾಗಿ ಬರದೇ ಏನು? ಮಳೆ ಬಂದಾಗ ನೀರೂ ಬರುತ್ತೆ!).

ಸ್ಕೂಲ್ಸ್, ಕಾಲೇಜಸ್, ಹಾಸ್‌ಪಿಟಲ್ಸ್, ಹೋಟೆಲ್ಸ್, ಬಸ್‌ಸ್ಟಾಪ್, ಎಲ್ಲವೂ ಎರಡೆರಡು ಹೆಜ್ಜೆ ಅಷ್ಟೇ. ಅವನು ಹೇಳುವ ರೀತಿ ನೋಡಿದರೆ ಮನೆ ಕಟ್ಟಿದ ಮೇಲೆ ಆ ಮನೆಯವರ ಅನುಕೂಲಕ್ಕೆಂದೇ ಈ ಸೌಲಭ್ಯಗಳೆಲ್ಲ ಬಂದವು ಅನ್ನುವ ಹಾಗಿತ್ತು!

ನಮ್ಮನೆಯಲ್ಲಿ ಒಬ್ಬೊಬ್ಬರ ಪ್ರಿಯಾರಿಟಿಯೂ ಬೇರೆ–ಬೇರೆ. ಅಮ್ಮನದು ದೇವಸ್ಥಾನವಾದರೆ, ಅಪ್ಪನದು ಪಾರ್ಕ್, ಲೈಬ್ರರಿ. ನನ್ನವಳದು ಬ್ಯೂಟಿ ಪಾರ್ಲರ್, ಗಾರ್ಮೆಂಟ್ ಷಾಪ್, ಮಗಳದು ಮಾಲ್ ಥಿಯೇಟರ್, ಮಗನದು ಫಾಸ್ಟ್ ಫುಡ್ ಜಾಯಿಂಟ್ಸ್. ನನಗೆ ಕ್ಲಬ್ ಇದ್ದರೆ ಸಾಕು! ಇವೆಲ್ಲ ಹತ್ತಿರುವಿರುವ ಮನೆಯ ಅನಿವಾರ್ಯತೆ!

ವಾಸ್ತವ ಏನೆಂದರೆ ಮನೆ ಅನುಕೂಲವಾಗಿದ್ದಾಗ ಇತರೆ ಅನುಕೂಲಗಳು – ಕಾಲೇಜ್ ಹಾಸ್ಪಿಟಲ್ – ಸಮರ್ಪಕವಾಗಿರುತ್ತಿರಲಿಲ್ಲ. ಇತರ ಅನುಕೂಲಗಳು ಸಮರ್ಪಕವಾಗಿದ್ದಾಗ ಮನೆ

ಸಮರ್ಪಕವಾಗಿರುತ್ತಿರಲಿಲ್ಲ. ಎರಡೂ ಸಮರ್ಪಕವಾಗಿದ್ದಾಗ ಬಾಡಿಗೆ ಜಾಸ್ತಿ! ಹಲ್ಲಿದ್ದಾಗ ಕಡಲೆ ಇಲ್ಲ, ಕಡಲೆ ಇದ್ದಾಗ ಹಲ್ಲಿಲ್ಲ ಎರಡೂ ಇದ್ದಾಗ ಕಾಸಿಲ್ಲ!

ಮನೆ ಮಾಲೀಕ ಜೊತೆ ಇಂಟರ್‌ವ್ಯೂ ಶುರುವಾಯಿತು. ಅವರು ಧಡೂತಿ ಆಸಾಮಿ, ಗಿರಿಜಾ ಮೀಸೆ, ನಿವೃತ್ತ ಸರ್ಕಾರಿ ಅಧಿಕಾರಿ ಆಸಾಮಿ ಕುಳಿತುಕೊಳ್ಳಲು ಹೇಳಲಿಲ್ಲ. ಶುರುವಾಯಿತು ಪ್ರಶ್ನೆಗಳ ಸುರಿಮಳೆ.

ಏನು? ಖಾಸಗಿ ಸಂಸ್ಥೆಯಲ್ಲಿ ಕೆಲಸವಾ? ಸಂಬಳಕ್ಕೆ ಏನೂ ತೊಂದರೆ ಇಲ್ಲಾ ತಾನೆ? ಮನೆಯಲ್ಲೆಷ್ಟು ಮಂದಿ? ನೆಂಟರಿಷ್ಟರು ಆಗಾಗ ಬರುತ್ತಿರುತ್ತಾರಾ? ಸಾಲ ಗೀಲ ಇದೆಯಾ? ಮನೆ ಮಂದಿ ಆರೋಗ್ಯ ಹೇಗೆ? (ಅಂಟು ಜಾಡ್ಯ ಏನು ಇಲ್ಲತಾನೇ ಅನ್ನುವ ಹಾಗಿತ್ತು). ಇದೇನು ಇಂಟರ್‌ವ್ಯೂ ನಾ ಅಥವಾ ಇಂಟರಾಗೇಷನಾ? ಅನ್ನಿಸಿತು ನನಗೆ.

ಪ್ರಶ್ನೆಗಳ ನಂತರ ನಾವುಗಳು ಮಾಡಲೇ ಬೇಕಾದ ಹಾಗೂ ಮಾಡಲೇ ಬಾರದ ಸಂಗತಿಗಳು:

ಪ್ರತಿ ತಿಂಗಳೂ ಒಂದನೇ ತಾರೀಖು ಕರಾರುವಾಕ್ಕಾಗಿ ಬಾಡಿಗೆ ಕೊಡಬೇಕು. (ಇಲ್ಲದಿದ್ದರೆ ನಿಮ್ಮ 'ಬಾಡಿ'ಗೆ ಕೊಡುತ್ತೇನೆ?!)

ಕೊಡ್ದೆ ಮತ್ತೆ 'ಅಲ್ಲಿರುವುದು ನಮ್ಮನೆ, ಇಲ್ಲಿರುವುದು ಸುಮ್ಮನೆ' ಎಂದು ಇರುಕ್ಕಾಗತ್ಯೇ? ಎಂದು ಮನಸ್ಸಿನಲ್ಲಿ ಅಂದುಕೊಂಡೆ.

ಪ್ರತಿ ವರ್ಷ ತಪ್ಪಿಸದೇ ಮನೆ ಪೈಂಟ್ ಮಾಡಿಸಬೇಕು.

ಪ್ರತಿ ವರ್ಷ ಬಾಡಿಗೆ 10% ಜಾಸ್ತಿ ಕೊಡಬೇಕು.

ಸಿಗರೇಟ್, ಆಲ್ಕೊಹಾಲ್ ಬಿಲ್‌ಕುಲ್ ಕೂಡದು (ಹಾಗೂ ಕೆಂಪು ತರಕಾರಿ!)

(ಇವರ ತರಹದವರು ಒಂದಷ್ಟು ಹೆಚ್ಚಾದರೆ ಮೆರೆಯುತ್ತಿರುವ ಮೂರು ಮೆಗಾ ಉದ್ದಿಮೆಗಳು ಮಲಗ್ಹೋಗತ್ವೆ).

ಟೀವಿ ಶಬ್ದ ಕಮ್ಮಿ ಇರಬೇಕು (ಪಾಪ ಅಪ್ಪ, ಅಮ್ಮ!)

ಅಷ್ಟೇ ಅಲ್ಲ ಗಟ್ಟಿಯಾಗಿ ಮಾತನಾಡಬಾರದು (ಈ ಮಹಾಶಯ ಇರುವುದು ಫಸ್ಟ್ ಫ್ಲೋರ್ ) ನನಗೆ ಶಬ್ದ ಅಂದರೆ ಆಗೊಲ್ಲ. ಈ ನಿಬಂಧನೆ ನನಗಿಷ್ಟವಾಯಿತು. ನನಗೂ ಶಬ್ದ ಅಂದರೆ ಆಗೊಲ್ಲ. ಅಮ್ಮನ ಬಲವಂತಕ್ಕಾಗಿ ಶಾಸ್ತ್ರಿಯ ಸಂಗೀತ ಇಷ್ಟವಿಲ್ಲದಿದ್ದರೂ ಕಲಿಯುತ್ತಿದ್ದಾಳೆ ನನ್ನ ಮಗಳು ಅದರಿಂದ ಮುಕ್ತಿ ಹಾಗೂ ಮಗನ ರ್‍ಯಾಪ್ ಪಾಪ್ ಮ್ಯೂಸಿಕ್‌ಗಳ ಚೀರಾಟದಿಂದ. ಮುಖ್ಯವಾಗಿ ನನ್ನವಳ 'ಗಟ್ಟಿಮಾತುಗಳು' ಇನ್ಮೇಲ್ ನಡೆಯೊಲ್ಲ! ಹಾ ಹಾ!

ಗೋಡೆಗೆ ಮೊಳೆಹೊಡೆಯಬಾರದು.

ಇಷ್ಟೆಲ್ಲ ಕೇಳಿದ ಮೇಲೆ ಈ ಮನೆ 'ಲೀಸ್'ಲಿರೊಲ್ಲ 'ಲೀಶ್'ಲಿರುತ್ತೆ ಎಂಬುದು ಖಚಿತವಾಯಿತು.

ಬಡ್ಜೆಟ್‌ಗೆ ತಕ್ಕಹಾಗೆ ಬಾಡಿಗೆ ಮನೆಗಳು ಸಿಗುವುದು ವಿರಳವಾಗಿದ್ದು ಒಂದು ಸಣ್ಣ ಮನೆಗೆ ಹೋದಾಗ ಅದು ನಮ್ಮೆಲ್ಲರನ್ನೂ ಹತ್ತಿರ ತಂದಿತ್ತು, ಜಾಗ ಕಮ್ಮಿ ಇದ್ದದರಿಂದ!!

# ತಲೆ ಓಡಿಸೋದು

**- ಹಾ. ಮೈ. ಸೂರಿ**

ಸಾಮಾನ್ಯವಾಗಿ ಎಲ್ಲಾ ದೊಡ್ಡ ದೊಡ್ಡ ಸಂಗೀತ ಸಭೆಗಳಲ್ಲಿ ಸಂಗೀತ ಷುರುವಾಗಿ ಅರ್ದ ತಾಸು ಕಳೆದ ಮೇಲೆ ಸಂಗೀತ ಕೇಳುತ್ತಾ ಕೇಳುತ್ತಾ ಕೆಲವರು ಸಂಗೀತಕ್ಕೆ ಮರುಳಾಗಿ ತಮ್ಮ ತಮ್ಮ ಕಣ್ಣು ಮುಚ್ಕೊಂಡು ತಲೆದೂಗುತ್ತಾ ಇರ್‍ತಾರೆ. ನಿಜವಾಗಿ ಸಂಗೀತ ಕೇಳ್ತಿದಾರೋ ಇಲ್ಲ ಮೆಲು ನಿದ್ರೆ ಮಾಡ್ತಿದಾರೋ ಅಂತಾನೇ ನೋಡುಗರಿಗೆ ಗೊತ್ತಾಗೋಲ್ಲ.

**ತಲೆ ಓಡಿಸಬೇಕು ಆದರೆ ಹೇಗೆ?**

ತಲೆ ಆಡಿಸೋ ಹಾಗೆ ಸಂಗೀತ ಸುಧೆ ಸೇವಿಸುತ್ತಾ ಕಿವೀನ ಅಲ್ಲಾಡಿಸೋಕ್ಕಾಗಲ್ಲ, ಮೂಗನ್ನಂತೂ ಅದರ ಜಾಗ ಬಿಟ್ಟು ಕದಲಿಸಕ್ಕೆ ಆಗೋದೇ ಇಲ್ಲ. ಆಗ ಒಟ್ಟು ಇಡೀ ತಲೇನೇ ತೂಗುತ್ತಾ ಇರಬೇಕು ಇಲ್ಲ ಅಕ್ಕಪಕ್ಕಕ್ಕೆ ಆಡಿಸುತ್ತಾ ಇರಬೇಕು. ಕಣ್ಣು ಮುಚ್ಕೊಂಡಿದ್ರಂತೂ ಮಹಾ ಶೋಭೆ.

ತಲೆ ಆಡಿಸೋ ವಿಚಾರ ಬಂದಾಗ ಈ ತಲೆ "ಓಡಿಸೋ" ವಿಚಾರನೂ ನನ್ನ ತಲೆ ಹೊಕ್ಕಿಬಿಟ್ಟಿತು. ಆಡಿಸೋದು ಒಂದು ಕಲೆ ಆದರೆ ಓಡಿಸೋದು ಇನ್ನೊಂದು ನಮೂನಿ ಕಲೆ. ಕೇಂದ್ರ, ರಾಜ್ಯ ಸರ್ಕಾರ ನಡೆಸೋ ಐ.ಎ.ಎಸ್. ಕೆ.ಪಿ.ಎಸ್. ಐ.ಆರ್.ಎಸ್.ಇ. ಇತ್ಯಾದಿ ಪರೀಕ್ಷೇಲಿ ಉತ್ತರ ಬರೀಬೇಕಾದ್ರೆ ನಾವು ನಮ್ಮ ನಮ್ಮ ತಲೆಗಳನ್ನು ಚನ್ನಾಗಿ ಓಡಿಸಬೇಕು. ಇಲ್ಲಿ ತಲೆ ಅಲ್ಲಾಡಿಸೋದಾಗಲೀ, ಇಲ್ಲ ತಲೆದೂಗೋದಾಗಲೀ ಎಳ್ಳಷ್ಟೂ ನಡೆಯೋಲ್ಲ.

ಕಣ್ಣು ಮುಚ್ಕೊಂಡು ಸುಶ್ರಾವ್ಯ ಸಂಗೀತ ಕೇಳ್ತಾ ತಲೆದೂಗಲು ಹೆಚ್ಚಿನ ಬುದ್ಧಿಶಕ್ತಿ ಬೇಡ. ಆದರೆ ಅದೇ ತಲೇನ ಬರೆಯೋ ಪರೀಕ್ಷೆಗಳಲ್ಲಿ ಓಡಿಸಬೇಕಾದ್ರೆ ಬಲು ಬುದ್ಧಿ ಬೇಕೇ ಬೇಕು ಅಂದಂತಾಯ್ತಲ್ಲವೇ. ನಮ್ಮ ನೆಚ್ಚಿನ ನೇಹಿಗ ರಾಮಣ್ಣ ಅವನ ತಲೆ ಓಡಿಸಿದ ಅನುಭವ ಅವನ ಬಾಯಿಂದಲೇ ಕೇಳಿ. ಆತ ಹೇಳಿದ್ದು ಹೀಗೆ : "ಒಮ್ಮೆ ಒಂದು ದೊಡ್ಡ ಆಫೀಸಿಗೆ ಹೋದೆ. ಹೋದ್ನೆ, ಅಲ್ಲಿ ದೊಡ್ಡ ಹುದ್ದೆಯಲ್ಲಿರೋ ಆಫೀಸರ್ ನೋಡ್ಬೇಕಾಗಿತ್ತು. ಅಲ್ಲಿ ಭೇಟಿಯ ಸಮಯ ಮಧ್ಯಾನ್ಹ ಮೂರು ಗಂಟೆಯಿಂದ ನಾಲ್ಕು ಗಂಟೆ ಅಂತ ಫಲಕ ಹಾಕಿದ್ರು. ಆ ಬೋರ್ಡ್ ಕೆಳಗೆ ಒಬ್ಬ ಸಿಪಾಯಿ ತಲೆದೂಗ್ತಾ (ಅರ್ಧ ನಿದ್ರಾವಸ್ಥೆ) ಕುಳಿತಿದ್ದ. ಯಾರನ್ನೂ ಒಳಗೆ ಬಿಡ್ತಾ ಇರಲಿಲ್ಲ. ನನಗೋ ಅರ್ಜಂಟ್ ಆಗಿತ್ತು. ಆಗಿನ್ನೂ ಹನ್ನೆರಡು ಗಂಟೆ ಆಗಿತ್ತು. ಸಾಹೇಬರನ್ನು ಭೇಟಿ ಆಗಲು ಇನ್ನೂ ಮೂರು ಗಂಟೆ ಕಾಯಬೇಕಲ್ಲ ಅಂತ ಚಿಂತೆಗೀಡಾದೆ. ಅರೆ, ನನ್ನ ಬುದ್ಧಿಗಿಷ್ಟು ಅಂದ್ಕೊಂಡು ಸ್ವಲ್ಪ ತಲೆ ಕೆರ್ಕೊಂಡು ತಲೆ ಓಡಿಸಿ ಕಾವಲುಗಾರನನ್ನು ನೋಡಿ ಆತ್ಮೀಯವಾಗಿ ನಗುತ್ತಾ "ಸಾಹೇಬರು ಇದಾರೇನಪ್ಪಾ ಎಂದೆ. ಅದಕ್ಕೆ ಅವನು

"ಇದಾರೆ, ಆದರೆ ಈಗ ಅವರನ್ನು ನೋಡೋಕ್ಕೆ ಆಗಲ್ಲ. ಮೂರು ಗಂಟೆಗೆ ಬನ್ನಿ "ಎಂದು ಮೇಲಿದ್ದ ಬೋರ್ಡ್ ತೋರಿಸಿದ. ನಾನು "ಮಾರಾಯ, ಬಹಳ ಅರ್ಜಂಟಿತ್ತು. ಅವರೇ ನನಗೆ ಫೋನ್ ಹಚ್ಚಿದ್ರು. ಅವರು ನನ್ನ ಹೆಣ್ಣು ಕೊಟ್ಟ ಮಾವ ಕಣಯ್ಯಾ" ಅಂದೆ ಹುಸಿನಗುತ್ತಾ. ಅವನು ಕಿರುನಗೆ ನಕ್ಕು "ಹಂಗ್ರಾ ಸ್ಸರ್ರ್ ಹೋಗ್ರೀ ಒಳಗೆ" ಎಂದದ್ದೇ ತಡ ನಾನು ಭರ್ರನೆ ಒಳನುಗ್ಗಿ ಸರ್ರನೆ ನನ್ನ ಕೆಲಸ ಮುಗಿಸಿಕೊಂಡು ಹೊರಬಂದಿದ್ದೆ" ಎಂದು ರಾಮಣ್ಣ ತನ್ನ ತಲೆ ಓಡಿಸಿದ ವಿಚಾರ ತಿಳಿಸಿದ. ನನ್ನ ಕುತೂಹಲ ಇನ್ನೂ ಮುಗಿಯದೇ ಇರುವಾಗ ಅವನು ಅದಕ್ಕೆ ಇನ್ನಷ್ಟು ಕುತೂಹಲ ಬೆರೆಸುವಂತೆ, "ಅಲ್ಲಯ್ಯಾ ಸೂರಿ, ಆ ಆಫೀಸರ್ ನನಗೆ ಹೆಣ್ಣು ಕೊಟ್ಟ ಮಾವ ಹೇಗಾಗ್ತಾರೆ, ಏಕೆಂದರೆ ಅವರಿಗೇ ಇನ್ನೂ ಮದುವೆ ಆಗಿಲ್ಲ. ನನ್ನನ್ನು ಒಳಗೆ ಬಿಟ್ಟ ಸಿಪಾಯಿಗೆ ಈ ಕುರಿತು ತಲೇನೇ ಓಡ್ಲಿಲ್ವಾ "ಎಂದು ಜೋರಾಗಿ ತಲೆ ಆಡಿಸಿ ನಕ್ಕ"


## ಆತ್ಮೀಯ ಓದುಗರಲ್ಲಿ ವಿನಂತಿ

ನಮ್ಮ ನಿಮ್ಮ ನಡುವೆ ಸಂಪರ್ಕ ಸೇತುವೆಯನ್ನು ಬಲಪಡಿಸುವ ನಿಟ್ಟಿನಲ್ಲಿ ತಾವು ದಯಮಾಡಿ ತಮ್ಮ ಈ ಮೇಯ್ಲ್ ವಿಳಾಸ, ಮೊಬೈಲ್ ಸಂಖ್ಯೆ, ತಮ್ಮ ಹೆಸರನ್ನು ಸೇರಿಸಿ ಹಾಗೂ ಚಂದಾದಾರರ ಸಂಖ್ಯೆಯನ್ನು ಸೇರಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ.

koravanjiaparanji@gmail.com

## ಅಪರಂಜಿ ಹವ್ಯಾಸೀ ಲೇಖಕರು ಸೇರಿ ನಡೆಸುತ್ತಿರುವ ಒಂದು ಸಾಹಸ.

ಇದಕ್ಕೆ ಜಾಹೀರಾತು ದೊರಕಿದರೆ ನಮ್ಮ ಕೆಲಸ ಸುಗಮ. ಈ ನಿಟ್ಟಿನಲ್ಲಿ ತಾವು ಸಹಕರಿಸಲು ಇಚ್ಛಿಸಿದರೆ ದಯವಿಟ್ಟು ವಿವರಗಳಿಗೆ ನಮ್ಮನ್ನು ಸಂಪರ್ಕಿಸಿ:

koravanjiaparanji@gmail.com

# ಮನ್ನಾಭಾಯ್

**- ವೈ.ಎಂ. ರಘುನಂದನ್**

> **ಕನ್ನಡ ತರಗತಿಯಲ್ಲಿ ಕಿರಿಕಿರಿ ಪ್ರಶ್ನೆಗಳು ಮೂಡುವುದೆಂದರೆ?**

ಹಳ್ಳಿಯ, ಉತ್ತಮ ಶ್ರೀಮಂತ ಗೌಡರ, ಏಕೈಕ ಮಗ, ಪುತ್ರರತ್ನ ನಮ್ಮ ಹುಚ್ಚೇಶ. ಏನಾದರೂ ಚಟುವಟಿಕೆಯಲ್ಲಿ ನಿರತ, ಸದಾ ಮಾಂಸಾಹಾರ(ಎಂ)ಪ್ರಿಯ. ಅದಕ್ಕೆ ಮೊದಲು ಬಿಯರ್(ಬಿ)ಸೇವನೆ. ನಂತರ ಬೀಡಾ(ಬಿ)ಜಗಿಯುವ ಹವ್ಯಾಸ. ಏನೇ ಇದ್ದರೂ ಸಚ್ಚಾರಿತ್ರ, ವಿನಯತೆ ಬಿಟ್ಟವನಲ್ಲ. ಗುರು, ಹಿರಿಯರು ಅಂದರೆ ತುಂಬಾ ಗೌರವ. ಹಾಗಾಗಿ ಸಜ್ಜನ(ಸ್)ಪ್ರಿಯ, ಏನೇ ಮಾತು ಆರಂಭಿಸುವಾಗಿ ಅವನಿಗೆ ಮನ್ನಾಭಾಯ್ ಎಂಬ ನಿಕ್ ನೇಮ್ ಇತ್ತು. ಹಳಬರು, ಹಿರಿಯರು ಮಾತ್ರ 'ಹುಚ್ಚೇಸಿ' ಎಂದು ಕರೆಯುತ್ತಿದ್ದದ್ದು. ಬಾಕಿ ಚಿಳ್ಳೆ, ಪಿಳ್ಳೆಗಳಿಗೆ ಅವನು ಮನ್ನಾಭಾಯ್ ಎಂದೇ ಹೆಸರುವಾಸಿ.

ಅಂದು ಕನ್ನಡ ಪಾಠ ಮಾಡುತ್ತಿದ್ದೆ. ಸರ್ವಜ್ಞನ ವಚನ ಸಾಗಿತ್ತು. ಬಾಗಿಲಲ್ಲಿ ಬಂದು ನಿಂತ, ಮನ್ನಾಭಾಯ್ ತನ್ನ ಹಿಂಡಿನೊಂದಿಗೆ.

'ಮನ್ನಿಸಿ ಸಾರ್, ತಮ್ಮ ತರಗತಿ ಬಳಗೆ ಬರಬಹುದೇ ಸಾರ್' ಎಂದ ಕೈ ಮುಗಿದು. ಏನೋ ಗ್ರಹಚಾರ ಕಾದಿದೆ ಅನ್ನೋ ಸೂಚನೆ ಸಿಕ್ಕಿತು.

'ಹುಚ್ಚೇಸಿ...ಇದು ಕನ್ನಡ ಕ್ಲಾಸು' - ಎಂದೆ ತಡವರಿಸಿ.

'ಕನ್ನಡ ಪಂಡಿತರು ಕನ್ನಡ ಅಲ್ಲದೆ, ಇನ್ನೇನು ಬಾಟನಿ, ಜಾಗ್ರಫಿ ಪಾಠನಾ ಮಾಡ್ತಾರೆ. ಮನ್ನಿಸಿ ಸಾರ್. ಕನ್ನಡ ಕ್ಲಾಸ್ ಅಂತ ಗೊತ್ತಿದ್ದೇ ಬಂದಿದೀವಿ ಸಾ. ಹೊರಗೆ ಮಳೆ, ನಮ್ಮ ಮೇಸ್ಟ್ರು ರಜೆ, ಅದ್ಕೆ ಸಾ...' ಎಂದ 'ಅದು ಸರಿ ಹುಚ್ಚೇಸಿ, ಕನ್ನಡ ಕ್ಲಾಸೇ ಯಾಕೆ' - ಅನುಮಾನಿಸಿದೆ.

'ನವಂಬರ್ ಬತ್ತಾಯಿದೆಯಲ್ಲ...ಅದ್ಕೆವಸಿ ತಯಾರಿ ಆಗಬೇಕಿದೆ' ಎಂದ.

'ನವಂಬರ್ ತಯಾರಿ ಅಂದ್ರೆ' - ಗೊತ್ತಾಗದೆ ಕೇಳಿದ್ದೆ.

'ಮನ್ನಿಸಿ ಸಾರ್. ಕನ್ನಡ ಪಂಡಿತರಾಗಿರೋ ನಿಮ್ಗೆ ಗೊತ್ತಿಲ್ಲರವ್ವಾ.... ರಾಜ್ಯೋತ್ಸವ ಬತ್ತದೆ. ಪ್ರಶಸ್ತಿಗಾಗಿ ತಯಾರಿ ಅಷ್ಟೇಯ' ಎಂದ. 'ಬನ್ನಿ ಕುಳಿತುಕೊಳ್ಳಿ...ಗಲಾಟೆ ಮಾಡದಿದ್ದರೆ ಸಾಕು' - ಎಂದೆ ಅಸಹಾಯಕನಾಗಿ.

'ಮನ್ನಿಸಿ ಸಾರ್... ನಮ್ಮ ಹುಡುಗ್ರು ಯಾರೂ ಗಲಾಟೆ ಮಾಡಕ್ಕಿಲ್ಲ. ನಿದ್ದೇಲಿ ಯಾರಾದ್ರೂ ಗಲಾಟೆ ಮಾಡಾಕೆ ಆಯ್ತುದಾಸಾ.... ನಾನೊಬ್ಬನೇ ವಿಚಾರ ಮಾಡ್ತ ಕುಂತ್ಕೋತೀನಿ ಅಷ್ಟೇಯ ಸಾ'- ಎಂದ.

ನಾನು ಪಾಠ ಆರಂಭಿಸಿದೆ, ಸರ್ವಜ್ಞನ ವಚನಗಳು ತ್ರಿಪದಿಗಳಲ್ಲಿದೆ. ಅವನು ನೂರಾರು ವಿಷಯಗಳ ಬಗ್ಗೆ ತಿಳಿಸಿದ್ದಾನೆ....'

'ಮನ್ನಿಸಬೇಕು ಸಾ....' ಎದ್ದು ಕೈಮುಗಿದ ಹುಚ್ಚೇಸಿ.

'ಏನು ಹುಚ್ಚೇಸಿ' – ಅಸಹನೆಯಿಂದಲೇಕೇಳಿದೆ.

'ನಂಗೆ ಪಾಂಚಾಲಿ.... ದ್ರೌಪದಿ ಗೊತ್ತು. ಈ ತ್ರಿಪದಿ ಯಾರು ಸಾ' – ಎಂದ. ತರಗತಿಯೆಲ್ಲಾ ಗೊಳ್ಳೆಂದು ನಕ್ಕರು.

'ತ್ರಿಪದಿ ಅಂದ್ರೆ ಮೂರು ಸಾಲಿನ ಪದ್ಯ....' ಸುಲಭವಾಗಿ ತಿಳಿಸಲು ಯತ್ನಿಸಿದೆ.

'ಮನ್ನಿಸಿ ಸಾರ್, ದ್ವಿಪದಿ ಅಂದ್ರೇ....' ಎಂದ ಹುಚ್ಚೇಸಿ.

'ಎರಡು ಸಾಲಿನ ಪದ್ಯ....' ಎಂದೆ ಗಂಭೀರವಾಗಿ.

'ಮನ್ನಿಸ ಬೇಕು ಗುರುಗಳು. ಸಪ್ತಪದಿ ಅಂದ್ರೆ 7 ಸಾಲಿನ ಪದ್ಯವಾ ಸಾ.... ಮದುವೇಲಿ ಬೆಂಕಿ ಮುಂದೆ ಸುತ್ತುತಾರಲ್ಲ ಗಂಡು, ಹೆಣ್ಣು' – ಎಂದ ತನ್ಮಯತೆಯಿಂದ. ತರಗತಿ ಪೂರ ಮತ್ತೊಮ್ಮೆ ನಕ್ಕಿತು.

ಮುನ್ನಾಭಾಯ್ ಎಂ.ಬಿ.ಬಿ.ಎಸ್ ಚಿತ್ರದ ಪ್ರೊ॥ ಆಸ್ಥಾನ ಪರಿಸ್ಥಿತಿ ನನ್ನದಾಗಿತ್ತು. ಹುಚ್ಚೇಸಿ ಕೈಕಟ್ಟಿ ನಿಂತೇ ಇದ್ದ. 'ವಿವಾಹದ ಸಪ್ತಪದಿ ಬೇರೆ, ಇದೇ ಬೇರೆ, ಒಂದು ರೀತಿ ಇದು ಸಾಹಿತ್ಯಕ್ಕೆ ಸೇರಿದ್ದು....' ವಿವರಿಸಿದ್ದೆ ಗಲಾಟೆ ಮಧ್ಯೆ.

'ನೀವು ದ್ವಿಪದಿ, ತ್ರಿಪದಿ, ದ್ರೌಪದಿ, ಸಪ್ತಪದಿ ಅಂದಾಗ ಡೆಲ್ಲಿ ಹುಡ್ಗೀರ ನೆನಪಾಯ್ತು ನೋಡಿ.....' ಹುಚ್ಚೇಸಿ ನಕ್ಕಿದ್ದ.

'ಏನದು ನೆನಪು...' ಹುಬ್ಬುಗಂಟಿಕ್ಕಿ ಕೇಳಿದ್ದೆ.

'ಮನ್ನಿಸಬೇಕು ಸಾರ್. ಡೆಲ್ಲೀಲಿ ಮದುವೇಗೆ ಮುಂಚೆ ಒಂದು ಹುಡ್ಗಿ ತಾಯಿ ಆದಳಂತೆ ಸಾರ್. ಮಗು ಯಾರನ್ನ ಹೋಲತ್ತೆ, ಅದರ ತಂದೆ ಯಾರು ಅಂತ ನಿರ್ಧರಿಸೋ ಹಕ್ಕು ಆ ತಾಯಿದಂತೆ. ಅವಳು ಹೆಸರು ಹೇಳಲು ನಾಚಿಕೊಂಡರೆ 'ಶರ್ಮ' ಮನೇದು ಅಂತ. ಅವಳು ಬಾಯಿಗೆ ಕೈ ಅಡ್ಡ ಇಟ್ಟು, ಕಣ್ಣು ಮುಚ್ಚಿದ್ದರೆ 'ಗುಪ್ತ ಮನೆ ತನದ್ದು ಕೇಸು' ಅಂತ, ಒಂದು ವೇಳೆ 2 ಬೆರಳು ತೋರಿಸಿದ. ದ್ವಿವೇದಿ ಮನೆ ಕೇಸಿದು ಅಂತ. ಮೂರು ಬೆರಳು ತೋರಿದರೆ ಇದು. ತ್ರಿವೇದಿ ಕೆಲಸ ಅಂತ. ನಾಲ್ಕು ಬೆರಳು ತೋರಿದರೆ ಚರ್ತುವೇದಿ ವಂಶದ ಕುಡಿ ಅಂತ.....'

ಹುಡುಗರ ಜೋರು ನಗೆ ತಡೆಯುತ್ತ ಕೂಗಿದ್ದೆ – 'ಸೈಲೆನ್ಸ್.... ನಾನು ಸರ್ವಜ್ಞನ ಪಾಠ ಮಾಡ್ತಾ ಇದ್ರೆ.... ನೀನು ಬೇರೆನೋ ಹೇಳ್ತಾ ಇದ್ದೀಯಲ್ಲ.. ಕಲ್ಲೇಶಿ ಪ್ಲೀಸ್ ಸ್ಟಾಪ್ ಇಟ್' – ಎಂದೆ.

'ಮನ್ನಿಸಿ ಸಾರ್, ಕನ್ನಡ ಕ್ಲಾಸಿನಾಗೆ ಸೈಲೆನ್ಸ್, ಪ್ಲೀಸ್ ಸ್ಟಾಪಿಟ್.... ಅಂತ ಆಂಗ್ಲಭಾಷೆ ಬ್ಯಾಡಿ ಬುಡಿ ಸಾರ್, ಏನೋ ಸರ್ವಜ್ಞನ ತರಹ, ಒಂದೊಂದು ವಿಚಾರ ಕೇಳ್ತಾಕೇಳ್ತಾ ವಿದ್ಯೆ ಪರ್ವತ ಆಗ್ಲಿ ನಮ್ಮ ಸ್ನೇಹಿತ್ರು ಅಂತ ಆಷ್ಟೇಯ. ನನ್ನ ತಪ್ಪು ಮನ್ನಿಸಬೇಕು ಸಾ.....' ಎಂದ ಕೈ ಮುಗಿದು.

'ನಿನ್ನ ಹೆಸರೇ ಮನ್ನಾಭಾಯ್. ಸಾಲ ಮನ್ನ ಪೂರ್ತ ಆಗ್ಲಿ ಬಿಡ್ಲಿ... ನೀನೇನೇ ಹೇಳಿದ್ರೂ ಮಾಫಿ, ಮನ್ನಾ ಮಾಡ್ತೀನಿ. ಬಿಡುಚಿಂತೆ. ಅಪರೂಪಕ್ಕೆ ಈ ಕನ್ನಡ ಕ್ಲಾಸಿಗೇ, ಯಾಕೆ ಬಂದಿದ್ದು ಹುಚ್ಚೇಸಿ....' ಎಂದೆ ನಗುತ್ತ.

'ಕನ್ನಡ ಕ್ಲಾಸಲ್ಲಿ ಕುಂತ್ರೆ ಸ್ಫೂರ್ತಿ ಬರ್ತದೆ. ಒಂದೆರಡು ಕವನ ರಚಿಸುತ್ತೀನಿ. ರಾಜ್ಯೋತ್ಸವಕ್ಕೆ, ಕವನ ರಚನೆಗೆ ಪ್ರಶಸ್ತಿ ನೀಡ್ತಾರೆ ನನಗೆ. ಸನ್ಮಾನಕ್ಕಾಗಿ ಒಂದು ಕವನ ಸಂಕಲನ ಪ್ರಿಂಟ್ ಹಾಕಿಸ್ತೀನಿ. ಒಂದೆರಡು ತ್ರಿಪದಿ ಈಗ್ಲೇ ರಚಿಸಿದೆ ಸಾರ್, ಇನ್ನುಳಿದ ಏಳೆಂಟು ಪದ್ಯ, ಕವನ ನೀವು ರಚಿಸಿ ಕೊಡಿ ಸಾ. ನಿಮ್ಮ ಹೆಸರೇಳಿ ಬದ್ಕೋತೀನಿ. ನಿಮ್ಮನೆಗೆ ಗಟ್ಟಿ ಹಾಲು ದಿನಾ ಫ್ರೀ ಆಗಿ ಸಪ್ಲೆ ಮಾಡ್ತೀನಿ. ನಿಮ್ಮಪ್ಪರಾಣೆಗೂ ಸಾ... ನಾನು ವಚನ ಭ್ರಷ್ಟ ಅಲ್ಲ ಸಾ.... ಮನ್ನಿಸಬೇಕು ಎಂದ ವಿನಯದಿಂದ.

ಅತಿ ವಿನಯಂ ದೂರ್ತ ಲಕ್ಷಣಂ ಅಂತ.... ಯೋಚಿಸಿದೆ. 'ಮನ್ನಾಭಾಯ್, ಹುಚ್ಚೇಸಿ, ಅದೇನು ತ್ರಿಪದಿ ಇಷ್ಟು ಬೇಗ ರಚಿಸಿದ್ದೀಯಾ... ಸ್ವಲ್ಪ ಓದಿ ತಿಳಿಸು' – ಎಂದೆ. ಮನೆಗೆ ವರ್ಷ ಪೂರ್ತಿ ಹಾಲಿನ ಚಿಂತೆಯಿಲ್ಲ, ಹೇಗಿದ್ದರೂ ಹುಚ್ಚೇಸಿ ಶ್ರೀಮಂತ, ದಿಲ್‌ದಾರ!

ಉತ್ತೇಜಿತನಾದ ಹುಚ್ಚೇಸಿ ತಾನು ಆಶುಕವಿ ಎಂದು ಸಾಬೀತು ಪಡಿಸುತ್ತ ರಚಿಸಿದ ತ್ರಿಪದಿ ಪದ್ಯ ಓದತೊಡಗಿದ್ದ.

'ನನ್ನ ಹೆಂಡ್ತಿ ಮಾರಮ್ಮ
ನಮ್ಮವ್ವ ಗೌರಮ್ಮ
ನಿಮ್ಮವ್ವ ಯಾರ್‍ಯಾರಿಗೆ ಆದರು ಅವ್ವ!' –

ಭಯಂಕರ ಚಪ್ಪಾಳೆ, ಚಪ್ಪಾಳೆ ನಡುವೆ ಸೀಟಿ ಎಲ್ಲಾ ಕೇಳಿ ಬಂದ

'ಆಹಾ...ಹುಚ್ಚೇಸಿ.... ಇದರ ಸ್ಫೂರ್ತಿ ಎಲ್ಲಿ ಸಿಕ್ಕಿತು' – ವಿಚಾರಿಸಿದೆ, ತಲೆಚೆಚ್ಚಿಕೊಂಡು.

'ಮನ್ನಿಸಬೇಕು... ಕನಕದಾಸರ ನಮ್ಮಮ್ಮ ಶಾರದೆ ಕೇಳಿ ಬರ್ದೆ ಸಾ...' ಎಂದ.

ಒಂದು ವೇಳೆ ಕನಕದಾಸರಿಗೆ ವಿಚಾರ ಗೊತ್ತಾದರೆ, ಎದ್ದು ಬಂದು ಎದೇಗೆ, ಒದಿಯದೆ ಬಿಟ್ಟಾರೆಯೆ ಅನ್ನಿಸದೇ ಇರಲಿಲ್ಲ.

'ಮನ್ನಿಸಬೇಕು...ಎಲ್ಡನೇದು ಓದಲೇ....' ಎಂದ. ನೀರಲ್ಲಿ ಮುಳುಗಿದ ನಂತರ ಚಳಿ ಏನು, ಮಳೆ ಏನು 'ಆಯ್ತು ಓದು ಎಂದೆ. ಹುಚ್ಚೇಸಿ ಶುರು ಹಚ್ಚಿಕೊಂಡಿದ್ದ.

ಹೆಂಡತಿ, ಹೆಂಡತೀ, ಹೆಂಡತೀ....
ನೀ, ಹೆಂಡ ಅತಿ, ಹೆಂಡ ಅತೀ, ಹೆಂಡ ಅತೀ–
ಕುಡಿದ್ಹಂಗೇಕೆ ಆಡ್ತಿ?

ಹುಡುಗರೆಲ್ಲರೂ ವಾಹ್, ವಾಹ್ ಎಂದು ಕಿರಿಚಾಡಿದರು.

'ಮನ್ನಿಸಬೇಕು ಸಾ... ಆದಷ್ಟೂ ಬೇಗ ಉಳಿದ ಎಂಟು ಪದ್ಯ ನೀವು ರಚಿಸಿ ಬಿಡಿ ಸಾ, ನನ್ನ ಸನ್ಮಾನ ಆದ ಮಾರನೇ ದಿನ ನಿಮಗೂ ಅರೇಂಜ್ ಮಾಡ್ತೀನಿ ಸಾ... ಹಾಗೆ ನಾಳೆಯಿಂದಲೇ ಮನೆಗೆ 2 ಲೀಟರ್ ಹಾಲು ಕಳಿಸ್ತೀನಿ ಸಾ... ಬರ್‍ತೀನಿ ಸಾ...' ಎಂದು ಹೊರಟ. ಹಿಂಡೂ ಹೊರಟಿತು. ತರಗತಿ ಖಾಲಿ ಆಗಿತ್ತು.

ನಕ್ಷತ್ರಿಕ ನಂತೆ ಕಾಡಿ ಎಂಟು ಪದ್ಯ ಬರೆಸಿಕೊಂಡು ಹೋದ. ಮನೆಗೆ ಮಗಳು ಬಾಣಂತನಕ್ಕೆ ಬಂದಿದ್ದಳು. ಹಾಲು ಬರುತ್ತಿದ್ದದ್ದು ಅನುಕೂಲವೇ ಆಯ್ತು. ಹುಚ್ಚೇಸಿಯ ಕವನ ಸಂಗ್ರಹ ಬಿಡುಗಡೆ ಆಗಿಯೂ ಹೋಯ್ತು. ಸನ್ಮಾನ ಸಮಾರಂಭವೂ ಆಯ್ತೂ. ಪೇಪರಲ್ಲಿ ವರದಿಯೂ ಬಂತು.

ಒಂದು ಸಂಜೆ ವಾಕಿಂಗ್ ಹೋಗ್ತಾ ಇದ್ದೆ. ಇದ್ದಕ್ಕಿದ್ದಂತೆ ಐದಾರು ಮಹಿಳೆಯರು(ಗ್ರಾಮೀಣ) ತಮ್ಮ ತಮ್ಮ ಹಿತ್ತಾಳೆ ಕೊಡ ಕೈಯಲ್ಲಿ ಹಿಡಿದು ನನ್ನ ಸುತ್ತಲೂ ಅಡ್ಡಕಟ್ಟಿ ನಿಂತರು.

'ನಮ್ಮ ಯಜಮಾನ್ರು ಹುಚ್ಚೇಸಿಗೆ ಪದ್ಯ ಬರೆದು ಕೊಟ್ಟವರು ನೀವೇಯಾ... ಮೇಸ್ಟ್ರು...' ಯಾರೋ ಮುಂದೆ ನಿಂತು ಕೇಳಿದರು.

'ಹೌದು' ಎಂದೆ ಅಚ್ಚರಿಯಿಂದ ನಿಂತು.

'ಸರಿ ಹಾಗಾದ್ರೆ... ಇವಯ್ಯನೇ ಅಂತೆ.... ಇಕ್ರಿ...'

ಅಂದಳಾಕೆ. ಎಲ್ಲರೂ ತಮ್ಮ ತಮ್ಮ ಕೊಡದಿಂದ ಕೈ, ಕಾಲು, ಮುಖ, ಮೂತಿ ನೋಡದಂಗೆ ಚಚ್ಚಿದರು.

'ಯಾಕ್ರಮ್ಮ.... ನಾನೇನು ತಪ್ಪು ಮಾಡ್ದೆ' – ನೋವು ತಿನ್ನುತ್ತ ಕೇಳಿದ್ದೆ.

'ನಿನ್ ಬಾಯ್ಗೆ ಹುಳಾಬೀಳ, ನಿನ್ನ ಕೈಗೆ ಕರಿನಾಗರ ಕಚ್ಚ... ನಿನ್ಗೆ ಬರಬಾರದ ರೋಗ ಬರ... ಅಲ್ಲಯ್ಯೋ ಮೇಸ್ಟ್ರೇ... ನಮ್ಮ ರುದ್ರಿ ಮಾರಮ್ಮನಂಗೆ ಇದ್ದಾಳಾ.... ಯಾರಯಾರಿಗೋ ಅವ್ವ ಆಗವ್ಳ.... ಎಂಡ ಕುಡಿದ್ಹಂಗೆ ಆಡ್ತಳಾ... ಇದೇಯಾ ಪದ್ಯ ನೀ ಬರೆದುಕೊಟ್ಟಿದ್ದು.... ನಿನ್ನ ಮನೆ ಹಾಳಾಗ....' ಎಂದು ಎಲ್ಲರೂ ಹೊರಟರು. ಸೀದಾ ಆಸ್ಪತ್ರೆಗೆ ದಾಖಲಾಗಿದ್ದೆ, ಮುಖ, ಮೈಗೆಲ್ಲಾ ಬ್ಯಾಂಡೇಜ್ ಹಾಕಿದರು.

ವಿಷಯ ತಿಳಿದು ಹುಚ್ಚೇಸಿ, ಮಿತ್ರ ಮಂಡಲಿ ಸಮೇತ ಆಸ್ಪತ್ರೆಗೆ ಬಂದ. ಕೈಮುಗಿದ.

'ಮನ್ನಿಸಬೇಕು ಸಾರ್... ನನ್ನ ಹೆಂಗಸ್ರು ಓದಿದವರಲ್ಲ, ಯಾರೋ ತಲೆ ಕೆಡಿಸಿದ್ದಾರೆ, ಯಾರು ಬರೆದದ್ದು ಹೆಂಡ್ತಿಮೇಲೆ ಅಂತ ಕೂಗಾಡಿದಳು ರುದ್ರಿ, ರೌದ್ರಾವತಾರತಾಳಿ. ನಾನು ಬಚಾವ್ ಆಗಲು ತಕ್ಷಣ 2 ನೀವು ಬರೆದದ್ದು 8 ನಾನು ಬರೆದದ್ದು ಅನ್ಬುಟ್ಟೆ ಅಷ್ಟೇ ಸಾರ್ ಮನ್ನಿಸಬೇಕು. ಅಂದ್ಹಂಗೆ ನಿಮ್ಗೆ ಸನ್ಮಾನ ಯಾವಾಗ ಮಡಿಕೊಳ್ಳಲಿ ಸಾರ್' ಎಂದು ಕೈ ಮುಗಿದೆ.

'ಈಗಾಗೋ ಸನ್ಮಾನ ಹೆಂಗಸ್ರು ಮಾಡಿದ್ದಾರೆ' ಬೇಡ ಎಂದೆ ಕೈಮುಗಿದೆ.

# ಜೇಮ್ಸ್ ಥರ್ಬರ್

**– ಶಿವಕುಮಾರ್**

ಸಾವಿರದ ಒಂಭೈನೂರ ಐವತ್ತೈದನೆಯ ಇಸವಿಯ ಫೆಬ್ರವರಿ ತಿಂಗಳ ಕೊರವಂಜಿಯಲ್ಲಿ 'ಕಟ್ಟೆಯೊಡೆದ ದಿನ' ಎಂಬ ಒಂದು ಬರಹ ಪ್ರಕಟವಾಗಿತ್ತು. ಅದರ ಲೇಖಕರಾದ ಅ. ರಾ. ಸೇ. ಬರಹದ ಕೆಳಗೆ ಥರ್ಬರ್ ಅನುಕರಣೆ ಎಂದೂ ನಮೂದಿಸಿದ್ದರು. ಲೇಖನವನ್ನು ಓದಿ ಮೆಚ್ಚಿದ್ದ ನಾನು ಈ ಥರ್ಬರ್ ಯಾರಪ್ಪಾ? ಎಂದು ಅವನ ಪುಸ್ತಕಗಳಿಗಾಗಿ ಪರದಾಡಿದೆ. 'ಥರ್ಬರ್ ಕಾರ್ನಿವಲ್' ಸಿಕ್ಕಿತು. ನಗೆ ಬರಹಗಳ ಚಿನ್ನದ ಗಣಿ ಅದು. ಅಂದಿನಿಂದ ನಾನು ಥರ್ಬರ್ ಭಕ್ತನಾದೆ.

ಜೇಮ್ಸ್ ಥರ್ಬರ್ ಹುಟ್ಟಿದ್ದು 1894ರ ಡಿಸೆಂಬರ್ 8ನೇ ತಾರೀಖು. ಅಮೆರಿಕೆಯ ಓಹಾಯೋ ರಾಜ್ಯದ ಕೊಲಂಬಸ್‌ನಲ್ಲಿ ಹುಟ್ಟಿದ ಥರ್ಬರ್‌ಗೆ ಬಾಲ್ಯದಲ್ಲೇ ದುರಾದೃಷ್ಟ ಕಾದಿತ್ತು. ಅಪಘಾತವೊದರಲ್ಲಿ ಕಣ್ಣಿಗೆ ಏಟುಬಿದ್ದು, ಅರ್ಧ ಕುರುಡನಾದ ಜೇಮ್ಸ್. ಈ ಕಾರಣದಿಂದ ಮೊದಲ ಮಹಾಯುದ್ಧದಲ್ಲಿ ಈತ ಸೇನೆಗೆ ಸೇರಲಾಗಲಿಲ್ಲ. ಆದರೂ ಶತಪ್ರಯತ್ನಮಾಡಿ ಥರ್ಬರ್ 1918ರಲ್ಲಿ ಪ್ಯಾರಿಸ್‌ನಲ್ಲಿದ್ದ ಗುಪ್ತಸಂದೇಶಗಳನ್ನು ಕಳುಹಿಸುವ ವಿಭಾಗದಲ್ಲಿ ಕೆಲಸಕ್ಕೆ ಸೇರಿದ. ಯುದ್ಧಾನಂತರ ಥರ್ಬರ್ ಪತ್ರಕರ್ತನಾದ. ಅವನ ಮಾತಿನಲ್ಲೇ ಹೇಳುವುದಾದರೆ, ಆಫ್ಟರ್ ದ ವಾರ್ ಐ ಫೆಲ್ ಇನ್‌ಟು ಜರ್ನಲಿಸಂ ವೆರಿ ಮಚ್ ಫಾಲಿಂಗ್ ಬ್ಯಾಕ್ ಫುಲ್ ಲೆಂತ್ ಆನ್ ಎ ಕಿಟ್ ಆಫ್ ಕಾರ್ಪೆಂಟರ್ಸ್ ಟೂಲ್ಸ್. ಥರ್ಬರನ ಹಾಸ್ಯಬರಹಗಳು ಎಷ್ಟು ಜನಪ್ರಿಯವಾಗಿತ್ತೆಂದರೆ 1927 ರಲ್ಲಿ ಅಮೆರಿಕೆಯ ಸುಪ್ರಸಿದ್ಧ ಹಾಸ್ಯಪತ್ರಿಕೆ ನ್ಯೂಯಾರ್ಕರ್ ಇವನನ್ನು ತನ್ನ ಬರಹಗಾರ ಮಂಡಲಿಗೆ ಆಹ್ವಾನಿಸಿತು. ಈ ಪತ್ರಿಕೆಯಿಂದಾಗಿ ಥರ್ಬರನ ಖ್ಯಾತಿ ವಿಶ್ವವ್ಯಾಪಿಯಾಯಿತು. ಹಾಸ್ಯ ಲೇಖನಗಳ ಜೊತೆಗೆ ಥರ್ಬರ್ ತನ್ನದೇ ಆದ ಶೈಲಿಯಲ್ಲಿ ವ್ಯಂಗ್ಯಚಿತ್ರಗಳನ್ನು ರಚಿಸಲು ತೊಡಗಿದ.

ಥರ್ಬರನ ಹಾಸ್ಯ ವಿಶಿಷ್ಟ ರೀತಿಯದು. ತೀರ ಸಹಜ ಸುಲಲಿತ ಶೈಲಿಯಲ್ಲಿ ಓದಿಸಿಕೊಂಡು ಹೋಗುವ ಥರ್ಬರ್ ಲೇಖನಗಳಲ್ಲಿ ಅವನು ಜೀವನವನ್ನು ನೋಡುವ ದೃಷ್ಟಿಕೋನ ಫಕ್ಕನೆ ನಗೆಯನ್ನು ಮಿಂಚಿಸುತ್ತದೆ. ಥರ್ಬರನ ಹಾಸ್ಯ ಎಲ್ಲರಿಗೂ ಒಗ್ಗುವಂತಹದಲ್ಲ. ಹಾಗಲಕಾಯಿ ಗೊಜ್ಜು ಗೋರಿ ಕಾಯಿ ಸಂಡಿಗೆ ಹೇಗೆ ಹಲವರನ್ನು ಬ್ರಹ್ಮಾನಂದದ ಅಂಚಿಗೆ ಒಯ್ಯುವುದೋ ಹಾಗೆ ಥರ್ಬರನ ಶೈಲಿ ಹಲವರಿಗೆ ಬಹು ಅಪ್ಯಾಯಮಾನ.

ಥರ್ಬರನ ಬರಹಗಳಲ್ಲಿನ ನಗೆಯ ಅಂಶ ಬಹುಮಟ್ಟಿಗೆ ಪ್ರಸಂಗದ ಪರಿಸರವನ್ನು ಅವಲಂಬಿಸಿರುವಂತಹದು. ಹಾಗಾಗಿ ಅದರ ರುಚಿಯನ್ನು ಕನ್ನಡದಲ್ಲಿ ಸವಿಯಬೇಕಾದರೆ ಛಾಯಾನುವಾದವಲ್ಲದೇ ಬೇರೆ ಮಾರ್ಗವಿಲ್ಲ. ಹಗಲುಗನಸುಗಳು ಯಾರಿಗೆ ಪರಿಚಯವಿಲ್ಲ! ದ ಸೀಕ್ರೆಟ್ ಲೈಫ್ ಆಫ್ ವಾಲ್ಟರ್ ಮಿಟ್ಟಿ ಎಂಬ ಥರ್ಬರ್ ಬರಹದಲ್ಲಿ ವಾಲ್ಟರ್ ಮಿಟ್ಟಿ ಇಂತಹ ಕನಸಿಗ. ಅಪರಂಜಿ ಕಿಡಿಗಳ ಕರ್ತೃ ಪ್ರಕಾಶ್ ಈ ಬರಹವನ್ನು 'ಚಿತ್ತವಿಹಾರ' ಎಂಬ ಹೆಸರಿನಲ್ಲಿ ಛಾಯಾನುವಾದ ಮಾಡಿದ್ದಾರೆ. ಥರ್ಬರನ ಹಾಸ್ಯದ

ಹೂರಣವನ್ನು ಸವಿಯಲು ಇದೊಂದು ಉತ್ತಮ ನಿದರ್ಶನ ಅನ್ನಿಸಿದ್ದರಿಂದ ಈ ಬರಹದ ಕೊನೆಯಲ್ಲಿ ಅವರ 'ಚಿತ್ತ ವಿಹಾರ' ಎಂಬ ಲೇಖನವನ್ನು ಅಳವಡಿಸಿರುವೆ.

1950 ರಲ್ಲಿ ಥರ್ಬರ್ ತನ್ನ ದೃಷ್ಟಿಶಕ್ತಿಯನ್ನು ಕಳೆದುಕೊಂಡು ಅಂಧನಾದ. ಅಂಧತ್ವ ಥರ್ಬರನ ಹಾಸ್ಯದ ಹೊನಲನ್ನು ಬತ್ತಿಸಲಿಲ್ಲ. ಕುರುಡನಾದ ನಂತರವೂ ಅವನು ಅನೇಕ ಕಥೆ ಕಾದಂಬರಿಗಳನ್ನು ಹೇಳಿ ಬರೆಯಿಸಿದ. 1961ರ ನವೆಂಬರ್ 2ರಂದು ಥರ್ಬರ್ ನ್ಯೂಯಾರ್ಕಿನಲ್ಲಿ ನಿಧನಹೊಂದಿದ. ಥರ್ಬರನ ಹಾಸ್ಯ ಪ್ರಜ್ಞೆ ಇಂದಿಗೂ ವಿಶ್ವಾದ್ಯಂತ ನಳನಳಿಸುತ್ತಾ ಜೀವಂತವಾಗಿದೆ.

## ಚಿತ್ತವಿಹಾರ

ಕಪ್ಪುಕಾರು ಮಾರ್ಕೆಟ್ ಮುಂದೆ ನಿಲ್ತು. ಶಾಂತಿ, ರಾಮು ಇಬ್ಬರೂ ಇಳಿದರು. 'ನಾನು ತರ್ಕಾರಿ ತರ್ತೀನಿ, ನೀವು ಒಂದು ಲೋಫ್ ಬ್ರೆಡ್ ತಂದು ಕಾರಲ್ಲೇ ಕೂತಿರಿ. ಆರ್ಡಿನರಿ ಬ್ರೆಡ್ ತನ್ನಿ ಸಾಕು' ಅಂತ ಹೇಳಿ ಶಾಂತಿ ಮಾರ್ಕೆಟ್ಟಿಗೆ ಹೋದಳು ರಾಮು ಮುಂದೆಯೇ ಇದ್ದ ಅಂಗಡಿಗೆ ಹೋದ. 'ಒಂದು ಬ್ರೆಡ್ ಕೊಡಿ' ಅಂದ. ಅಂಗಡಿಯವ, 'ಮಿಲ್ಕ್ ಲೋಫ್ ಕೊಡಲೋ, ಫ್ರೂಟ್ ಇರೋದು ಕೊಡಲೋ?' ಅಂತ ಪ್ರಶಿಸಿದ. ರಾಮು, 'ಫ್ರೂಟ್ ಇರೋದೇ ಕೊಡಿ' ಅಂತ ಹೇಳಿ, ಅದನ್ನು ತಂದು ಕಾರಿನಲ್ಲಿ ಕೂತ. ಪಕ್ಕದಲ್ಲಿ ಒಂದು ಕಾರ್ಮಿಕರ ಗುಂಪು ಘೋಷಣೆಗಳನ್ನು ಕೂಗ್ತಾ ಹೋಯ್ತು. ಅವರ ಬೇಡಿಕೆಗಳನ್ನು ಕೇಳ್ತಾ ರಾಮು ತಲ್ಲೀನನಾದ..................

'ಸಾರ್ ಇವತ್ತು ಮುಖ್ಯಮಂತ್ರಿಗಳನ್ನು ಮೂರು ಗಂಟೆಗೆ ಭೇಟಿಮಾಡಬೇಕು. ಅವರು ಬಹಳ ಕೋಪದಲ್ಲಿದ್ದಾರೆ. ನೀವು ಇಲ್ದಿದ್ರೆ ನಮ್ಮ ಕೆಲಸ ಆಗೋದಿಲ್ಲ. ಕಾರ್ಖಾನೆ ಕೆಲಸಗಾರರೂ ಬಹಳ ಜೋರಾಗಿ ಗಲಭೆ ಮಾಡ್ತಾ ಇದ್ದಾರೆ' ಅಂತ ವಡಿವೇಲು ರಾಮುಗೆ ಹೇಳಿದ. ಯೂನಿಯನ್ ಲೀಡರ್ ರಾಮುಗೆ ಯಾವ ಭಯವೂ ಇರಲಿಲ್ಲ. ಮೂರು ಗಂಟೆಗೆ ರಾಮು ಮತ್ತು ಅವನ ಮೂವರು ಆಪ್ತರು ಮುಖ್ಯಮಂತ್ರಿಗಳ ಕೊಠಡಿಗೆ ಹೋದರು. ರಾಮು ಹೇಳಿದ. 'ನಿಮ್ಮ ಸಹಕಾರ ಇಲ್ಲದೇ ಈ ಮುಷ್ಕರ ನಿಲ್ಲುವುದಿಲ್ಲ. ನಮ್ಮ ಕೆಲಸಗಾರರು ರಕ್ತದ ಕೊನೆಯ ಹನಿ ಇರುವವರೆಗೂ ತಮ್ಮ ಹಠ ಬಿಡುವುದಿಲ್ಲ. ನಿಮ್ಮ ಸರ್ಕಾರ ಬಹಳ ಬೇಜವಾಬ್ದಾರಿ ಹೇಳಿಕೆ ಕೊಟ್ಟು ಪರಿಸ್ಥಿತಿಯನ್ನು ಹದಗೆಡಿಸಿದೆ 'ಅಂತ ರಾಮು ಗಡಸುದನಿಯಿಂದ ಹೇಳಿದ. ಅವನ ಕಣ್ಣುಗಳು ಕೆಂಡದಂತೆ ಹೊಳೆಯುತ್ತಿದ್ದವು. ಅವನ ಧ್ವನಿ ಕತ್ತಿಯ ಅಲುಗಿನಂತೆ ಹರಿತವಾಗಿತ್ತು. ಮುಖ್ಯಮಂತ್ರಿಗಳು ತಲೆಬಾಗಿದರು. 'ರಾಮು ಅವರೇ ನೀವು ಹೇಳಿದ್ದು ನಿಜ. ಏನಾದರೂ ಮಾಡಿ ಈ ಮುಷ್ಕರ ನಿಲ್ಲುವ ಹಾಗೆ ಮಾಡಬೇಕು.' ಅಂತ ದೈನ್ಯತೆಯಿಂದ ಕೇಳಿದರು. ಕಾರ್ಮಿಕರನ್ನ ಉದ್ದೇಶಿಸಿ ರಾಮು ಮಾಡಿದ ಭಾಷಣ ನಾಡಿನ ಎಲ್ಲ ಪತ್ರಿಕೆಗಳಲ್ಲೂ ಪ್ರಕಟವಾಯ್ತು. ಮುಷ್ಕರ ನಿಲ್ತು! 'ಬ್ರೆಡ್ ತಂದ್ರಾ?' ಶಾಂತಿ ಕೇಳಿದಳು. ರಾಮು ಗಾಬರಿಯಾಗಿ ಸುತ್ತಮುತ್ತ ನೋಡಿದ. 'ತಂದೆ' ಎನ್ನುತ್ತಾ ಕಾರನ್ನು ಸ್ಟಾರ್ಟ್ ಮಾಡಿದ.

'ಪಾಪುಗೆ ಎರಡು ನೋಟ್ ಬುಕ್ ಕೊಂಡ್ಕೋಬೇಕು. ಸ್ವಲ್ಪ ಕಾರ್ ನಿಲ್ಸಿ' ಅಂದಳು ಶಾಂತಿ. ಕಾರು ಅಂಗಡಿ ಮುಂದೆ ನಿಲ್ತು. 'ಇಲ್ಲೇ ಕೂತಿರಿ ಬಂದೆ' ಎನ್ನುತ್ತಾ ಶಾಂತಿ ಅಂಗಡಿಗೆ ಹೋದಳು. ಕಾರಿನ ಪಕ್ಕದ ಗೋಡೆಯ

ಮೇಲೆ ಒಂದು ಸಿನಿಮಾ ಪೋಸ್ಟರ್ ಇತ್ತು. ದೊಡ್ಡ ಸೈಜಿಂದು. ಅದರಲ್ಲಿ ಒಬ್ಬ ಡಾಕ್ಟರನ ಚಿತ್ರ ಇತ್ತು, ರೋಗೀನ ಪರೀಕ್ಷೆ ಮಾಡ್ತಿರೋ ತರಹ...........

'ಡಾಕ್ಟರೇ ಬೇಗ ಬನ್ನಿ ನಮ್ಮ ಅಣ್ಣಂಗೆ ಬಹಳ ಸುಸ್ತಾಗಿದೆ ನೀವೇ ಕಾಪಾಡಬೇಕು' ಅಂತ ಓಡಿಬಂದು ದಣಿದಿದ್ದ ಯುವಕ ಕೇಳಿಕೊಂಡ. ರಾಮು ತನ್ನ ಬ್ಯಾಗ್ ಕೈಗೆ ತೊಗೊಂಡು ಹೊರಟ. ಹಳ್ಳಿಯ ದಾರಿ, ಬಿಸಿಲಿನ ತಾಪ ಬೇರೆ. ರೋಗಿಯ ಮನೆ ಸೇರಿದರು. ಎರಡು ನಿಮಿಷದಲ್ಲಿ ರಾಮುಗೆ ಗೊತ್ತಾಯಿತು. ಇವನಿಗೆ ಅಪೆಂಡಿಕ್ಸ್ ಆಪರೇಷನ್ ಆಗಬೇಕು, ತಡಮಾಡಲು ಸಾಧ್ಯವಿಲ್ಲ. ಸರಿ ರೋಗಿನ ಎರಡು ಮೈಲಿ ದೂರದಲ್ಲಿದ್ದ ಚಿಕ್ಕ ಆಸ್ಪತ್ರೆಗೆ ಕರೆದೊಯ್ದರು. ಅಲ್ಲಿದ್ದ ಡಾಕ್ಟರು 'ಈ ಆಪರೇಷನ್ ದೊಡ್ಡ ಆಸ್ಪತ್ರೆಲಿ ಮಾಡಬೇಕು. ಇಲ್ಲಾಗುಲ್ಲ' ಎಂದರು. ರಾಮು ಹೇಳಿದ 'ಅವನು ಒಂದು ಗಂಟೇನೂ ತಡೆಯಲಾರ ನಾವಿಬ್ರೂ ಸೇರಿ ಇಲ್ಲೇ ಆಪರೇಷನ್ ಮಾಡೋಣ'. ಡಾಕ್ಟರು ಭಯದಿಂದ ನಡುಗಿದರು. ರಾಮು ಹೇಳಿದಂತೆ ರೋಗಿಗೆ ಪ್ರಜ್ಞೆ ತಪ್ಪುವ ಔಷಧಿ ಕೊಟ್ಟು ಆಪರೇಷನ್ ಶುರುವಾಯ್ತು. ಅರ್ಧ ಗಂಟೇಲೇ ರೋಗಿಯ ಸಂಬಂಧಿಕರಿಗೆ ರಾಮು ಹೇಳಿದ 'ಸುಧಾರಿಸ್ಕೋತಾನೆ, ಹೆದರಬೇಡಿ'. ರೋಗಿಯ ತಾಯಿ ರಾಮುವಿನ ಕಾಲಿಗೆ ಬೀಳಲು ಯತ್ನಿಸಿದಳು..............

'ಇದೇನ್ರೀ ಸಾದಾ ಬ್ರೆಡ್ ತನ್ನಿ ಅಂದ್ರೆ ಫ್ರೂಟ್ ಬ್ರೆಡ್ ತಂದಿದೀರಾ? 'ಅಂತ ಶಾಂತಿ ರೇಗಿದಳು. 'ಮರೆತು ಹೋಯ್ತು' ಅಂತ ರಾಮು ತೊದಲಿದ. 'ಸರಿ ನಾನು ಯಾವ ಕೆಲಸಾನೂ ನಿಮಗೆ ಹೇಳೋ ಹಾಗಿಲ್ಲ' ಅಂದಳು ಶಾಂತಿ. ಕಾರು ಲೈಬ್ರರಿ ಮುಂದೆ ನಿಲ್ತು. ಶಾಂತಿ ಲೈಬ್ರರಿಗೆ ಹೋದಳು. ರಾಮು ಕಾರಲ್ಲಿ ಕೂತ. ಪಕ್ಕದ ಸ್ಕೂಲಿನಿಂದ ಇಬ್ಬರು ಹುಡುಗರು ಕ್ರಿಕೆಟ್ ಬ್ಯಾಟುಗಳನ್ನು ಬೀಸುತ್ತಾ ಬರ್ತಿದ್ದರು........

ಸೀಮಿತ ಓವರ್ ಪಂದ್ಯ. ಎದುರಾಳಿಗಳ ಟೀಮು ನೂರೈವತ್ತು ರನ್ನುಗಳಿಗೆ ಆಲೌಟ್. ರಾಮುಗೆ ನಾಲ್ಕು ವಿಕೆಟ್. ರಾಮು ಟೀಮ್ ಬ್ಯಾಟ್ ಮಾಡಲು ಶುರು. ಎದುರಾಳಿಗಳ ಧಾಳಿಗೆ ತತ್ತರಿಸಿ ಎಂಟು ಜನ ನಲವತ್ತು ರನ್ನಿಗೆ ಬಿದ್ದರು. ರಾಮು ಬ್ಯಾಟಿಂಗ್‌ಗೆ ಹೊರಟ. ಸಂಗಡಿಗ ಬ್ಯಾಟ್ಸ್‌ಮನ್ ಮಲೇರಿಯಾ ರೋಗಿಯಂತೆ ನಡುಗುತ್ತಿದ್ದ. ರಾಮು ಬ್ಯಾಟ್ ಬೀಸಲು ಆರಂಭಿಸಿದ. ಅವನ ಬ್ಯಾಟ್ ಬಿಸಿಲಿನಲ್ಲಿ ಕಂಗೊಳಿಸಿತು. ಸಂಗಡಿಗನಿಗೆ ಬ್ಯಾಟಿಂಗ್ ಸಿಗದಂತೆ ಕಾಪಾಡಿಕೊಂಡು ಆಡಿದ. ಸ್ಕೋರು ನೂರ ನಲವತ್ತಾರು. ರಾಮು ಸಂಗಡಿಗ ಬ್ಯಾಟಿಂಗ್ ಮಾಡುವ ಸಂಭವ. ಸದ್ಯ, ಅವನು ಆ ಓವರಿನಲ್ಲಿ ಉಳಿದ ಒಂದು ಬಾಲನ್ನು ತಡೆಗಟ್ಟಿದ. ಈಗ ರಾಮು ಸರದಿ. ಮೊದಲನೇ ಬಾಲು ಭರ್ಜರಿ ಬೌಂಡರಿ! ಎರಡನೇ ಬಾಲು ಸಿಂಗಲ್ ಗಿಟ್ಟಿಸಿದಾಗ ಪ್ರೇಕ್ಷಕರೆಲ್ಲಾ ಮೈದಾನದೊಳಕ್ಕೇ ನುಗ್ಗಿ ಧಾಳಿ ಮಾಡಿದರು. ಪ್ರಚಂಡ ಬ್ಯಾಟಿಂಗ್ ಮಾಡಿ ಟೀಮಿನ ಗೆಲುವಿಗೆ ಕಾರಣನಾದ ರಾಮು ಅಭಿಮಾನಿಗಳ ಹೆಗಲು ಸವಾರಿ ಮಾಡಿ ಪೆವಿಲಿಯನ್ ತಲುಪಿದ.

'ಕಾರಿಗೆ ಪೆಟ್ರೋಲ್ ಹಾಕಿಸ್ಬೇಕೇನು?' ಶಾಂತಿ ಕೇಳಿದಳು. ರಾಮು ಕಕ್ಕಾಬಿಕ್ಕಿಯಾಗಿ ಅವಳ ಕಡೆ ನೋಡಿದ. 'ಯಾಕ್ರೀ ಮೈ ಹುಷಾರಾಗಿದೆ ತಾನೇ?' ಅಂತ ಶಾಂತಿ ಆತಂಕಪಟ್ಟಳು. 'ನನಗೇನಾಗಿದೆ? ಈಗ ತಾನೇ ಸೆಂಚುರಿ...' ರಾಮು ಅರ್ಧ ವಾಕ್ಯದಲ್ಲೇ ಮಾತು ನಿಲ್ಲಿಸಿದ.

ಕಪ್ಪು ಕಾರು ಮನೆಯತ್ತ ಸಾಗಿತ್ತು.